PRGI NO : KNKAN/26/A0884

E NAMMA DHURTHI NEWS KANNADA DAILY NEWS PAPER

ಈ ನಮ್ಮ

# ಧೃತಿ ನ್ಯೂಸ್

ಸದೃಢತೆಯ ಹೆಜ್ಜೆಯೊಂದಿಗೆ..., ಕನ್ನಡ ದಿನಪತ್ರಿಕೆ

- ಕೊಪ್ಪಳ
- ವಿಜಯನಗರ
- ರಾಯಚೂರು
- ಬಳ್ಳಾರಿ
- ಗದಗ
- ಬಾಗಲಕೋಟೆ
- ಹಾವೇರಿ
- ಧಾರವಾಡ

ಸಂಪಾದಕರು: ಚಂದ್ರಕಾಂತ | ಸಂಪುಟ: 01 ಸಂಚಿಕೆ: 192 ಪುಟಗಳು: 04 ಬೆಲೆ: 02 ದಿನಾಂಕ: 16-09-2026 ಬುಧವಾರ | email: enammadhruthinews@gmail.com | Pho : 7353595904

## ಮಳೆಗಾಗಿ ಪ್ರಾರ್ಥಿಸಿ ಗಣೇಶನಿಗೆ ವಿಶೇಷ ಪೂಜೆ ಭಕ್ತರಿಗೆ ಅನ್ನಪ್ರಸಾದ



ಧೃತಿ ನ್ಯೂಸ್ ಸುದ್ದಿ

ಕುಷ್ಟಗಿ: ನಗರದ ಶ್ರೀ ಗಜಾನನ ಸೇವಾ ಸಮಿತಿ ಬುರಡಿಮಠ ಸಮಿತಿಯ ವತಿಯಿಂದ ಸತತ 18ನೇ ವರ್ಷವೂ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ತಾಲೂಕಿನಲ್ಲಿ ಸಮರ್ಪಕ ಮಳೆಯಾಗದೆ ರೈತರು ಸಂಕಷ್ಟಕ್ಕೆ ಸಿಲುಕಿರುವ ಹಿನ್ನೆಲೆಯಲ್ಲಿ, ಉತ್ತಮ ಮಳೆ ಸುರಿದು ನಾಡು ಸಮೃದ್ಧಿಯಾಗಲಿ, ರೈತರ ಬದುಕು ಹಸನಾಗಲಿ ಎಂದು ಗಣೇಶನಿಗೆ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಲಾಯಿತು. ಈ ಸಂದರ್ಭದಲ್ಲಿ ಸುತ್ತಮುತ್ತಲಿನ ವಾರ್ಡ್‌ಗಳ ಸಕಲ ಭಕ್ತರಿಗಾಗಿ ಹೋಳಿಗೆ, ತುಪ್ಪ, ಕಡಬು, ಅನ್ನ?ಸಾರು ಸೇರಿದಂತೆ ವಿವಿಧ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು. ಸಮಿತಿಯ ಪದಾಧಿಕಾರಿಗಳು, ಸದಸ್ಯರು ಹಾಗೂ ಭಕ್ತರು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

## ಪ್ರಜಾಪ್ರಭುತ್ವದ ಮೌಲ್ಯ ಅರಿತು ಉತ್ತಮ ನಾಯಕತ್ವ ಬೆಳೆಸಿಕೊಳ್ಳಿ ಅಶೋಕ್ ಶಿಗ್ಗಾವಿ



ಧೃತಿ ನ್ಯೂಸ್ ಸುದ್ದಿ

ಕುಷ್ಟಗಿ: ವಿದ್ಯಾರ್ಥಿ ದೆಸೆಯಿಂದಲೇ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅರ್ಥಮಾಡಿಕೊಂಡು, ಉತ್ತಮ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಬೇಕು. ಈ ಉದ್ದೇಶದಿಂದ ಸರ್ಕಾರ ಯುವ ಸಂಸತ್ ಕಾರ್ಯಕ್ರಮವನ್ನು ಆಯೋಜಿಸಿದೆ ಎಂದು ತಹಶೀಲ್ದಾರ್ ಅಶೋಕ್ ಶಿಗ್ಗಾವಿ ಹೇಳಿದರು.

ಪಟ್ಟಣದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಮಂಗಳವಾರ ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಾಗೂ ಯುವ ಸಂಸತ್ ಸ್ಪರ್ಧೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ವಿಶೇಷ ಉಪನ್ಯಾಸ ನೀಡಿದ ಲೇಖಕ ಕಿಶನ್ ರಾವ್ ಕುಲಕರ್ಣಿ ಮಾತನಾಡಿ, ಪ್ರತಿಯೊಬ್ಬ ನಾಗರಿಕನಿಗೂ ತನ್ನ ಹಕ್ಕುಗಳನ್ನು ಚಲಾಯಿಸುವ ಹಾಗೂ ತನ್ನ ಸರ್ಕಾರವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಕಲ್ಪಿಸಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಹೆಗ್ಗಳಿಕೆಯಾಗಿದೆ. ವಿಶ್ವಸಂಸ್ಥೆ 2007ರಲ್ಲಿ ಪ್ರತಿವರ್ಷ ಸೆಪ್ಟೆಂಬರ್ 15ರಂದು ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಆಚರಿಸಲು ಘೋಷಿಸಿತು. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವುದು, ಜನರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಪ್ರಜಾಸತ್ತಾತ್ಮಕ ತತ್ವಗಳನ್ನು ಬಲಪಡಿಸುವುದು ಈ ದಿನದ ಉದ್ದೇಶವಾಗಿದೆ ಎಂದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ತುಗ್ಗಲಪ್ಪ ಎಚ್. ದೇಸಾಯಿ ಮಾತನಾಡಿ, ವಿದ್ಯಾರ್ಥಿಗಳು ಪ್ರಜಾಪ್ರಭುತ್ವದ ಆಶಯಗಳನ್ನು ಅರಿತು ಸಂವಿಧಾನದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಪದವಿ ಕಾಲೇಜಿನ ವಿದ್ಯಾವತಿ ಗೋಟೂರು ಮಾತನಾಡಿ, ಪ್ರಜಾಪ್ರಭುತ್ವದ ಯಶಸ್ಸಿಗೆ ಜಾಗೃತ ಹಾಗೂ ಜವಾಬ್ದಾರಿಯುತ ನಾಗರಿಕರ ಪಾತ್ರ ಮಹತ್ವದ್ದಾಗಿದೆ ಎಂದರು. ತಾಲೂಕು ವಕೀಲರ ಸಂಘದ ಅಧ್ಯಕ್ಷ ಎಚ್.ಆರ್. ನಾಯಕ್ ಮಾತನಾಡಿ, ಸಂವಿಧಾನ ನೀಡಿರುವ ಹಕ್ಕುಗಳ ಜೊತೆಗೆ ಪ್ರತಿಯೊಬ್ಬರೂ ತಮ್ಮ ಕರ್ತವ್ಯಗಳನ್ನೂ ಅರಿತುಕೊಳ್ಳಬೇಕು ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಮಾಲಾ ಪಡಸಾಸಾಲಿಮನಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸಂವಿಧಾನ, ಪ್ರಜಾಪ್ರಭುತ್ವ ಹಾಗೂ ನಾಯಕತ್ವದ ಕುರಿತು ಅರಿವು ಮೂಡಿಸಲು ಯುವ ಸಂಸತ್ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದರು. ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿ ಯಮನಪ್ಪ ಚೂರಿ ಮಾತನಾಡಿದರು. ಬಸವರಾಜ ಚಳಗೇರಿ, ಮಲ್ಲಿಕಾರ್ಜುನ ಮೇಟಿ, ಕಳಕಪ್ಪ ಹುಲಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ಸಂವಿಧಾನದ ಪೀಠಿಕೆಯನ್ನು ಸಾಮೂಹಿಕವಾಗಿ ಓದುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಹಾಗೂ ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು. ಡಾ. ನಾಗರಾಜ ಹೀರ ಸ್ವಾಗತಿಸಿದರು. ಹನುಮಂತಪ್ಪ ಚೌದರಿ ಕಾರ್ಯಕ್ರಮ ನಿರ್ವಹಿಸಿದರು.

ಈ ನಮ್ಮ ಧೃತಿ ನ್ಯೂಸ್

ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಮೊ: 7353595904

ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ-2026 ರ ಪ್ರಯುಕ್ತ ಯುವ ಸಂಸತ್ ಸ್ಪರ್ಧೆಗೆ ಚಾಲನೆ ನೀಡುವ ಕಾರ್ಯಕ್ರಮ

# ಸಂವಿಧಾನದ ಮೌಲ್ಯಗಳನ್ನು ಯುವಜನತೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು : ರಾಘವೇಂದ್ರ ಹಿಟ್ನಾಳ್

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಡಾ. ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂವಿಧಾನದಿಂದಾಗಿ ಇಂದು ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಯಾಗಿ ನಿಂತಿದೆ. ಸಂವಿಧಾನ ನೀಡಿದ ಹಕ್ಕು ಮತ್ತು ಮೌಲ್ಯಗಳನ್ನು ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ್ ಅವರು ಹೇಳಿದರು.

ಮಂಗಳವಾರದಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೊಪ್ಪಳ ಹಾಗೂ ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ-2026 ರ ಪ್ರಯುಕ್ತ ಆಯೋಜಿಸಿದ್ದ ತಾಲೂಕು ಮಟ್ಟದ ಹಾಗೂ ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ ಗಳಿಗೆ ಚಾಲನೆ ನೀಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯುವಕರು ಮತ್ತು ವಿದ್ಯಾರ್ಥಿಗಳು ಕೇವಲ ಪದವಿ ಪಡೆಯುವುದಕ್ಕೆ ಸೀಮಿತವಾಗದೆ, ದೇಶದ ರಾಜಕೀಯ ಮತ್ತು ಆಡಳಿತ ವ್ಯವಸ್ಥೆ (ಸ್ಥಳೀಯ ಸಂಸ್ಥೆಗಳಿಂದ ಸಂಸತ್ತಿನವರೆಗೆ) ಹಾಗೂ ಸಾಮಾನ್ಯ




ಜ್ಞಾನವನ್ನು ಬೆಳೆಸಿಕೊಳ್ಳುವುದು ಅತ್ಯಗತ್ಯ. ಸರ್ಕಾರದ ವತಿಯಿಂದ ಸಂವಿಧಾನದ ಪೀಠಿ-ಕೆಯನ್ನು ಓದಿಸುವ ಮೂಲಕ ಅದರ ಆಶಯ ಮತ್ತು ಸಾರಾಂಶವನ್ನು ಪ್ರತಿಯೊಬ್ಬರಿಗೂ ತಲುಪಿಸುವ ಕೆಲಸ ಮಾಡಲಾಗುತ್ತಿದೆ. ದೇಶದ ಸರ್ವತೋಮುಖ ಅಭಿವೃದ್ಧಿ ಯುವಕರ ಕೈಯಲ್ಲಿದ್ದು, ಸಂಸತ್ ಸ್ಪರ್ಧೆಗಳಂತಹ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಅನುಭವವನ್ನು ಬೆಳೆಸಿಕೊಳ್ಳಬೇಕು ಎಂದು ಅವರು ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಮಾತನಾಡಿ, ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಹಕ್ಕು ಮತ್ತು ಕರ್ತವ್ಯಗಳನ್ನು ಒದಗಿಸಿದೆ. ಅಂಬೇಡ್ಕರ್ ಅವರ ಕೊಡುಗೆಯನ್ನು ಸ್ಮರಿಸುತ್ತಾ, ಪ್ರಜಾಪ್ರಭುತ್ವ ಎಂದರೆ ಜನರ ಮಾತು, ಹಕ್ಕುಗಳು ಹಾಗೂ ಅಭಿವೃದ್ಧಿಗೆ ಸ್ಪಂದಿಸುವುದಾಗಿದೆ ಎಂದು ತಿಳಿಸಿದರು. ಶಾಸಕಾಂಗದ ಕಾರ್ಯಕಲಾಪಗಳು, ಕಾಯ್ದೆ ಮತ್ತು ಬಿಲ್‌ಗಳ ಚರ್ಚೆಗಳ ಬಗ್ಗೆ ಮಕ್ಕಳಿಗೆ ಪ್ರತ್ಯಕ್ಷ ಅರಿವು ಮೂಡಿಸಲು ಮುಂದಿನ ಡಿಸೆಂಬರ್‌ನಲ್ಲಿ ನಡೆಯುವ ಅಧಿವೇಶನಕ್ಕೆ ಕೊಪ್ಪಳ ಜಿಲ್ಲೆಯ ಶಾಲಾ ಮಕ್ಕಳನ್ನು ಕರೆದೊಯ್ಯುವ ಯೋಜನೆ ಇದೆ. ಸಂವಿಧಾನದಲ್ಲಿ ಮಹಿಳೆಯ-ರಿಗೆ ಮೀಸಲಾತಿ ಇದ್ದರೂ, ಪ್ರಾತಿನಿಧ್ಯ ಪಡೆಯಲು ಕಠಿಣ ಪರಿಶ್ರಮ ಅಗತ್ಯ. ತಮ್ಮ ಸ್ವಂತ ರಾಜಕೀಯ ಪಯಣ ಹಾಗೂ ಹೆಲಿಕಾಪ್ಟರ್ ಮೂಲಕ ನಾಮಪತ್ರ ಸಲ್ಲಿಕೆಗೆ ತೆರಳಿದ ಪ್ರಸಂಗವನ್ನು ಹಂಚಿಕೊಳ್ಳುತ್ತಾ, ವಿದ್ಯಾರ್ಥಿನಿಯರು ಶಿಕ್ಷಣದ ಮೂಲಕ ಉನ್ನತ



ಹಂತಕ್ಕೇರಲು ಕರೆ ನೀಡಿದರು. ವಸತಿ ಶಾಲೆಗಳಲ್ಲಿ ಗ್ರಂಥಾಲಯ, ಗುಣಮಟ್ಟದ ಆಹಾರ ಹಾಗೂ ಮೂಲಸೌಕರ್ಯಗಳ ಕೊರತೆಯಿದ್ದರೆ ಧೈರ್ಯವಾಗಿ ಪ್ರಶ್ನಿಸಿ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿದರು. ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಸೃಜನಶೀಲ **ಹಾಗೂ ಒಳಿತಿನ ಕಾರ್ಯಗಳಿಗೆ ಮಾತ್ರ ಬಳಸಬೇಕು;** ದುರ್ಬಳಕೆ ಮಾಡಿಕೊಳ್ಳಬಾರದು. ಕೇವಲ ಪದವಿ ಪಡೆಯುವುದಷ್ಟೇ ಅಲ್ಲದೇ, ಕಲಿಕೆಯ ಸಾಮಥ-ರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು. ಶಿಕ್ಷಕರು ಹಾಗೂ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬೇಕೆಂದು ಅವರು ತಿಳಿಸಿದರು. ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ್ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂವಿಧಾನದ ಮೂಲಕ ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮಾನತೆ, ಸ್ವಾತಂತ್ರ ?ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ ಯ (ಆರ್ಟಿಕಲ್ 19) ದೊರೆತಿದೆ.

2ನೇ ಪುಟಕ್ಕೆ....

## ವಚನ ಸಾಹಿತ್ಯ ಶರಣರ ಅನುಭಾವದ ನುಡಿ : ಗವೀಶ ಸಸಿಮಠ

ಧೃತಿ ನ್ಯೂಸ್ ಸುದ್ದಿ

ಯಲಬುರ್ಗಾ: ವಚನ ಸಾಹಿತ್ಯ ಎಂದರೆ 12 ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಉದಯಿಸಿದ, ಜನಸಾಮಾನ್ಯರ ಆಡು ಭಾಷೆಯಲ್ಲಿರುವ ಒಂದು ವಿಶಿಷ್ಟವಾದ ಕಾವ್ಯ ಹಾಗೂ ಸಾಹಿತ್ಯ ವಚನ ಸಾಹಿತ್ಯ ಸರಳ ಭಾಷೆ: ಸಂಸ್ಕೃತದ ಪ್ರಾಬಲ್ಯವನ್ನು ಧಿಕ್ಕರಿಸಿ, ಸಾಮಾನ್ಯ ಜನರಿಗೆ ಅರ್ಥವಾಗುವ ಸರಳವಾದ ಕನ್ನಡ ಆಡುಭಾಷೆಯನ್ನು ಬಳಸಲಾಗಿದೆ.ಅನುಭವದ ನುಡಿ ಇದು ಕೇವಲ ಕಲ್ಪನೆಯಿಂದ ಮೂಡಿ ಬಂದಿರುವದಿಲ್ಲ ಶರಣರ ಜೀವನದ ಅನುಭಾವದಿಂದ ಮೂಡಿ ಬಂದಿದೆ ಎಂದು ಕೊಪ್ಪಳದ ಶರಣ ಶ್ರೀ ಗವೀಶ ಸಸಿಮಠ ಹೇಳಿದರು.

ತಾಲೂಕಿನ ವಣಗೇರಿ ಗ್ರಾಭದ ಗುರು ಬಸವ ಮಹಾಮನೆಯಲ್ಲಿ ಬಸವ ಪ್ರೀಯಾ ಕೂಡಲ ಚನ್ನ ಬಸವಣ್ಣನವರ 12 ನೇ ಮಾಸಿಕ ವಚನ ದರ್ಶನ ಚಿಂತನಾ ಗೋಷ್ಠಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು. ಕಾಲದ ಬಗೆಗೆ ಶರಣರ ನಿಲುವನ್ನು ತಿಳಿಸುವ ಒಂದು ಅದ್ಭುತ ವಚನ ಜೀವವು ರೂಪ ತಳೆದದ್ದು ಪ್ರಕೃತಿಯ ಪಲ್ಲಟಗಳಲ್ಲಿಯೇ. ಅದಕ್ಕೆ ಅಂಟಿಕೊಳ್ಳುವ ಸಂಬಂಧಗಳೆಲ್ಲವೂ ಅದರ ಕೊಡುಗೆ. ಆದ-ರೆ ಉದಯ, ಮಧ್ಯಾಹ್ನ, ಅಸ್ತಮಯ, ಕತ್ತಲೆ ಬೆಳಗು, ದಿನ ವಾರ ಲಗ್ನತಿಥಿ ಮಾಸ ಸಂವತ್ಸರ ಎಂದೆಲ್ಲ ಕಾಲವನ್ನು ಉದ್ದಕ್ಕೂ ಕಟ್ಟಿಕೊಂಡು ಬದುಕನ್ನು ಅವುಗಳಲ್ಲಿ ಹಂಚಿಬಿಡುವುದರಿಂದ ಜೀವನ ಜಂಜಾಟದ ಸುಳಿಗೆ ಸಿಕ್ಕಿಕೊಳ್ಳುತ್ತದೆ ಶರಣರ ವಿಚಾರಗಳು ಜೀವದ ನಿಜ



ಸ್ವರೂಪವನ್ನು ಮರೆಸಿ ಸಂಸಾರದ ಭ್ರಮೆಯಲ್ಲಿ ತೇಲಿಸುತ್ತಿರುತ್ತವೆ. ಆಗ ಕಾಲ ಕಟ್ಟಳೆಯಾಗುವುದು. ಕಾಲದ ಬಳುವಳಿಯಂತೆ ಕರ್ಮ ಮೆತ್ತಿಕೊಳ್ಳುವುದು. ಆದ್ದರಿಂದ ಕಾಲಕ್ಕೆ ಹೊರಗಾದ ಪರಮಚೈತನ್ಯವನ್ನು ಕಾಲದೊಳಗೆ ಸಿಲುಕಿದವರು ಕಾಣಲಾಗುವುದಿಲ್ಲ. ಕಲ್ಪಿತ ಕಾಲಕ್ಕೆ ನಮ್ಮನ್ನು ಕಟ್ಟಿ ಹಾಕಿಕೊಳ್ಳುವುದೇ ಮಹಾನ್ ಮೂರ್ಖತನ ಕಾಲಾಧೀನವಾದ ಶರೀರದಲ್ಲಿ ಕಾಲಾತೀತವಾದ ಜೀವವಿದೆ. ಅದನ್ನು ಹೆಚ್ಚುಕಡಿಮೆ ಮರೆತೇ ಬಿಟ್ಟಿದ್ದೇವೆ ಅಥವಾ ಅದರತ್ತ ನಿರ್ಲಕ್ಷ್ಯ ತೋ-ರಿದ್ದೇವೆ. ತನ್ನ ಸ್ವರೂಪದ ಅನುಭವ ಪಡೆದುಕೊಂಡ ಜೀವನಲ್ಲಿ ದೇಹದ ಗುಣಗಳು ಮಾಯವಾಗುತ್ತವೆ. ಕಾಲದ ಕೈಗೆ ಸಿಗದ ವಿವೇಕವೆಂದರೆ ಇದು. ಈ ಜಾಗೃತಿ ನಮ್ಮಲ್ಲೇ ಹುಟ್ಟಬೇಕೆಂದು ಹೇಳಿದರು.

ಮಕ್ಕಳ್ಳಿಯ ಶಿವಾನಂದ ಮಠದ ಶಿವಾನಂದ ಮಹಾಸ್ವಾಮಿಗಳು ಮಾತನಾಡಿ ವಚನ ಸಾಹಿತ್ಯದಲ್ಲಿ ಚನ್ನ ಬಸವಣ್ಣನವರು ಸೇರಿದಂತೆ ಅನೇಕ ಶರಣ-ರು ಈ ಪರಮ ಸುಖದ ಸ್ಥಿತಿಯನ್ನು ತಮ್ಮ ವಚನಗಳಲ್ಲಿ ಮನೋಜ್ಞವಾಗಿ ವಿವರಿಸಿದ್ದಾರೆ. ದೇಹ ವಾಹಸನ ಪ್ರಪಂಚವಾಸನ ಶಾಸ್ತ್ರ ವಾಸನ ಮರೆತು ನಿಷ್ಷಕ್ತಿಯಾಗಬೇಕೆಂದು ಹೇಳಿದರು. ಕಾರ್ಯಕ್ರಮ ಉದ್ದೇಶಿಸಿ ದೊಡ್ಡಯ್ಯ ಶಾಸ್ತ್ರಿ ಅಬ್ಬಿಗೇರಿ. ಫಕೀರಯ್ಯ ಶಾಸ್ತ್ರಿ ನಿವೃತ್ತ ಪಿಎಸ್ಐ ಬಸವನಗೌಡ ಪಾಟೀಲ್, ಅಮರೇಶಪ್ಪ ಬಳ್ಳಾರಿ ಅರ್ಚನಾ ಸಸಿಮಠ ಮಾತನಾಡಿದರು.

ವೇದಿಕೆಯಲ್ಲಿ ವಣಗೇರಿಯ ಬಸವ ಯೋಗಾಶ್ರಮದ ಯಶ್ವಂತ ಶರಣರು. ಸಿಂಧನೂರ ಬಸವಕೇಂದ್ರದ ಅಧ್ಯಕ್ಷೆ ಗಂಗಮ್ಮ ಕುರಕುಂದಿ ರುದ್ರಪ್ಪ ಸೂಳಿಕೇರಿ ಮುದಿಯಪ್ಪ ಮೇಟಿ.ದೇವಪ್ಪ ಕೋಳೂರು ಗಿರಿಮಲ್ಲಪ್ಪ ಪರಂಗಿ. ನಾಗನಗೌಡ ಜಾಲಿಹಾಳ ಪಾಲಾಕ್ಷಪ್ಪ ಹುಣಶಿಹಾಳ ಅಮರೇಶ ದೇವಲ್.ಬಾಲಪ್ಪ ಕರುವಿನ.ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಜಿಲ್ಲೆಯಾದ್ಯಂತ ಮದ್ಯಪಾನ ನಿಷೇಧ ಜಿಲ್ಲಾಧಿಕಾರಿ ಕವಿತಾ ಎಸ್, ಮನ್ನಿಕೇರಿ

ಧೃತಿ ನ್ಯೂಸ್ ಸುದ್ದಿ

ವಿಜಯನಗರ: ಸೆಪ್ಟೆಂಬರ್ 14 ರಿಂದ 27 ರವರೆಗೆ ಗಣೇಶ ಹಬ್ಬ ಜಿಲ್ಲೆಯಾದ್ಯಂತ ಆಚರಿಸಲಿದ್ದು, ಈ ಸಂಬಂಧ ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ಜರುಗದಂತೆ ಮುಂಜಾಗೃತ ಕ್ರಮವಾಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ.



ಮದ್ಯ ಮಾರಾಟ ಮತ್ತು ಸಾಗಾಣಿಕೆಯನ್ನು ನಿಷೇಧಿಸಿ ಹಾಗೂ ಮದ್ಯದಂಗಡಿ, ಬಾರ್ ಮತ್ತು ರೆಸ್ಟೋರೆಂಟ್‌ಗಳನ್ನು ಮುಚ್ಚುವಂತೆ ನಿಷೇಧಾಜ್ಞೆ ಮಾಡಲಾಗಿದೆ.

ಗಣೇಶ ವಿಸರ್ಜನೆ ವೇಳೆ 3ನೇ ದಿನವಾದ ಸೆಪ್ಟೆಂಬರ್ 16 ರ ಬೆಳಿಗ್ಗೆ 6 ಗಂಟೆಯಿಂದ ಸೆಪ್ಟೆಂಬರ್ 17ರ ಬೆಳಿಗ್ಗೆ 6 ಗಂಟೆಯವರೆಗೆ ಮತ್ತು 5ನೇ ದಿನವಾದ ಸೆಪ್ಟೆಂಬರ್ 18 ರ ಬೆಳಿಗ್ಗೆ 6 ಗಂಟೆಯಿಂದ ಸೆಪ್ಟೆಂಬರ್ 19 ರ ಬೆಳಿಗ್ಗೆ 6 ಗಂಟೆಯವರೆಗೆ ಜಿಲ್ಲೆಯಾದ್ಯಂತ ಮದ್ಯದಂಗಡಿಗಳು, ಬಾರ್ ಮತ್ತು ರೆಸ್ಟೋರೆಂಟ್‌ಗಳು ಕಡ್ಡಾಯವಾಗಿ ಮುಚ್ಚಿರಲಿದ್ದು, ಮದ್ಯ ಮಾರಾಟ ಹಾಗೂ ಸಾಗಾಣಿಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ಆದೇಶವನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಪೊಲೀಸ್ ಅಧೀಕ್ಷಕರು ಹಾಗೂ ಅಬಕಾರಿ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕವಿತಾ ಎಸ್, ಮನ್ನಿಕೇರಿ ಆದೇಶಿಸಿದ್ದಾರೆ.

# ಕುಕನೂರಿನಲ್ಲಿ ಅತ್ಯಂತ ಸಡಗರ-ಸಂಭ್ರಮದಿಂದ ಜರುಗಿದ ಯಮನೂರ ಸ್ವಾಮಿ ಗಣಪತಿ ಮೂರ್ತಿ ಪ್ರತಿಷ್ಠಾಪನೆ ಹಾಗೂ ವಿಜೃಂಭಣೆಯ ಮೆರವಣಿಗೆ

ಧೃತಿ ನ್ಯೂಸ್ ಸುದ್ದಿ

ಕುಕನೂರು: ನಾಡಿನಾದ್ಯಂತ ಗಣೇಶ ಹಬ್ಬದ ಸಂಭ್ರಮ ಮನೆ ಮಾಡಿದ್ದು, ಐತಿಹಾಸಿಕ ಕುಕನೂರು ಪಟ್ಟಣದಲ್ಲಿ ಯಮನೂರ ಸ್ವಾಮಿ ಗಣಪತಿ ಮೂರ್ತಿಯ ಪ್ರತಿಷ್ಠಾಪನಾ ಮಹೋತ್ಸವವು ಅತ್ಯಂತ ವಿಜೃಂಭಣೆ ಹಾಗೂ ಧಾರ್ಮಿಕ ಜಿಜಡಿತಂಣಡಿ (ಶ್ರದ್ಧಾ-ಭಕ್ತಿ) ಯೊಂದಿಗೆ ಜರುಗಿತು. ಪಟ್ಟಣದ ಪ್ರಮುಖ ವೃತ್ತವಾದ ಅಂಬೇಡ್ಕರ್ ಸರ್ಕಲ್‌ನಿಂದ ಆರಂಭವಾದ ಈ ಭವ್ಯ ಮೆರವಣಿಗೆಯು ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಕಣ್ಮನ ಸೆಳೆಯಿತು.

**ವಿವಿಧ ಗಣ್ಯರಿಂದ ಅದ್ದೂರಿ ಚಾಲನೆ:**

ಈ ಧಾರ್ಮಿಕ ಉತ್ಸವ ಹಾಗೂ ಮೆರವಣಿಗೆಗೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಯುವ ಮುಖಂಡರು ಹಾಗೂ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಪ್ರಮುಖ ಉದ್ಯಮಿಗಳಾದ ಅನಿಲ್ ಆಚಾರ್ ಹಾಗೂ ಬಿಜೆಪಿ ತಾಲ್ಲೂಕು ಅಧ್ಯಕ್ಷರಾದ ಮಾರುತಿ



ಗೌರಾಳ್ ಅವರು ವಿಶೇಷ ಆಹ್ವಾನಿತರಾಗಿ ಹಾಗೂ ಮುಖಂಡರಾಗಿ ಭಾಗವಹಿಸಿದ್ದರು. ಇವರೊಂದಿಗೆ ಪಕ್ಷದ ಹಿರಿಯ ಮುಖಂಡರು ಹಾಗೂ ಗಣ್ಯರು ಉಪಸ್ಥಿತರಿದ್ದು, ಮೆರವಣಿಗೆಗೆ ಚಾಲನೆ ನೀಡಿ ಸಮಸ್ತ ನಾಡಿನ ಜನತೆಗೆ ಗಣೇಶ ಹಬ್ಬದ ಶುಭ ಹಾರೈಸಿದರು.

**ವಿವಿಧೆಡೆ ವಿಘ್ನಹರ್ತನ ಪ್ರತಿಷ್ಠಾಪನೆ:**

ಕುಕನೂರು ಪಟ್ಟಣದ ಕೋಳಿ ಪೇಟೆ, ಕಿಲಾದ್ ಓಣಿ ಸೇರಿದಂತೆ ವಿವಿಧ ಪ್ರಮುಖ ಕಡೆಗಳಲ್ಲಿ ಸ್ಥಳೀಯ ಸಂಘ-ಸಂಸ್ಥೆಗಳು ಹಾಗೂ ಯುವಕ ಮಂಡಳಗಳ ವತಿಯಿಂದ ವಿಘ್ನಹರ್ತನಾದ ಗಣಪತಿಯ ಮೂರ್ತಿಯನ್ನು ಶಾಸ್ತ್ರೋಕ್ತವಾಗಿ ಹಾಗೂ ಭಕ್ತಿ-ಭಾವದಿಂದ ಪ್ರತಿಷ್ಠಾಪಿಸಲಾಯಿತು. ಪ್ರತಿಯೊಂದು ವಾರ್ಡ್ ಹಾಗೂ ಬಡಾವಣೆಗಳಲ್ಲಿಯೂ ನವ ಯುವಕರು ಉತ್ಸಾಹದಿಂದ ಪಾಲ್ಗೊಂಡು ಹಬ್ಬದ ರಂಗನ್ನು ಹೆಚ್ಚಿಸಿದರು.

**ಕಣ್ಮನ ಸೆಳೆದ ಮೆರವಣಿಗೆಯ ಸಂಭ್ರಮ:**

ಮೂರ್ತಿ ಪ್ರತಿಷ್ಠಾಪನೆಗೂ ಮುನ್ನ ನಡೆದ ಮೆರವಣಿಗೆಯಲ್ಲಿ ಯುವಕರು ಹಾಗೂ ಭಕ್ತಾದಿಗಳು ದೊಡ್ಡ ಸಂಖ್ಯೆಯಲ್ಲಿ ಸೇ-ರಿದ್ದರು. ಮಂಗಳಮುಖಿ ವಾದ್ಯಗಳು, ಭಜನೆ ಹಾಗೂ ಸಾಂಪ್ರದಾಯಿಕ ಕಲಾ ತಂಡಗಳ ಪ್ರದರ್ಶನದೊಂದಿಗೆ ಸಾಗಿದ ಮೆರವಣಿಗೆಯಲ್ಲಿ ಯುವಕರು ಉತ್ಸಾಹದಿಂದ ನೃತ್ಯ ಮಾಡಿದರು. ಆಕಾಶಕ್ಕೆ ಬಣ್ಣದ ಕಾಗದಗಳನ್ನು (ಅಂಟಿ-ಜಿಜಣಣು)? ಚೆಲ್ಲುತ್ತಾ, ಹೂಮಳೆಗರೆದು, ಜೈಕಾರ ಕೂಗುತ್ತಾ ಸಂಭ್ರಮಿಸಿದರು. ಅಲಂಕೃತ ವಾಹನದಲ್ಲಿ ವಿರಾಜಮಾನರಾದ ಗಣಪತಿಯ ಭವ್ಯ ರೂಪ ಹಾಗೂ ಮೆರವಣಿಗೆಯ ಪ್ರತಿಯೊಂದು ಸುಂದರ ಕ್ಷಣಗಳು ಸ್ಥಳದಲ್ಲಿದ್ದ ಎಲ್ಲರ ಕ್ಯಾಮೆರಾಗಳಲ್ಲಿ ಹಾಗೂ ಫೋಟೋಗಳಲ್ಲಿ ಅತ್ಯಂತ ವಿಜೃಂಭಣೆಯಿಂದ ಮೆರವಣಿಗೆ ನಡೆಸಿದರು ಯುವಕ ಸಂಘದ ಎಲ್ಲಾ ಯುವಕ ಮಿತ್ರರು ಗ್ರಾಮದ ಹಿರಿಯರು ಎಲ್ಲರೂ ಪಾಲ್ಗೊಂಡು ಯಶಸ್ವಿ ಮಾಡಿದರು.

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

1ನೇ ಪುಟದಿಂದ....

ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ–2026 ರ ಪ್ರಯುಕ್ತ ಯುವ ಸಂಸತ್ ಸ್ಪರ್ಧೆಗೆ ಚಾಲನೆ ನೀಡುವ ಕಾರ್ಯಕ್ರಮ

## ಸಂವಿಧಾನದ ಮೌಲ್ಯಗಳನ್ನು ಯುವಜನತೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು : ರಾಘವೇಂದ್ರ ಹಿಟ್ನಾಳ್

ಪ್ರಜಾಪ್ರಭುತ್ವ ಎಂದರೆ ಕೇವಲ ಮತದಾನಕ್ಕೆ ಸೀಮಿತವಾಗಿರದೆ, ಪ್ರತಿಯೊಬ್ಬರು ಭಾಗವಹಿಸುವ ಪ್ರಕ್ರಿಯೆಯಾಗಿದೆ. ವಿದ್ಯಾರ್ಥಿಗಳಲ್ಲಿ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳ ಕಾರ್ಯಾಚರಣೆಯ ಬಗ್ಗೆ ಅರಿವು ಮೂಡಿಸಲು ಈ ವರ್ಷ ಶಾಲಾ, ತಾಲೂಕು ಮತ್ತು ಕಾಲೇಜು ಮಟ್ಟದಲ್ಲಿ 'ಯುವ ಸಂಸತ್' ಸ್ಪರ್ಧೆಯನ್ನು ಆಯೋಜಿಸಲಾಗುತ್ತಿದೆ. ವಿದ್ಯಾರ್ಥಿಗಳು ಸೋಶಿಯಲ್ ಮೀಡಿಯಾ ಮತ್ತು ರೀಲ್ಸ್‌ಗಳಿಗೆ ಮಾತ್ರ ಸೀಮಿತವಾಗದೆ ಸಂವಿಧಾನದ ಪೀಠಿಕೆ, ಮೂಲಭೂತ ಹಕ್ಕುಗಳು ಹಾಗೂ ಮೂಲಭೂತ ಕರ್ತವ್ಯಗಳ ಬಗ್ಗೆ ತಿಳಿದುಕೊಂಡು ಜವಾಬ್ದಾರಿಯುತ ಪ್ರಜೆಗಳಾಗಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಉಪನ್ಯಾಸದಲ್ಲಿ ಮಾತನಾಡಿದ ಮಂಗಳೂರು ಕಾಲೇಜಿನ ಪ್ರಾಂಶುಪಾಲರಾದ ಡಾ.ಪ್ರಭುರಾಜ ನಾಯಕ ಅವರು, ಪ್ರಜಾಪ್ರಭುತ್ವವು ಕೇವಲ ರಾಜಕೀಯವಲ್ಲ, ಅದೊಂದು ಜೀವನ ಮಾರ್ಗ. ಪ್ರಜಾಪ್ರಭುತ್ವ ಎಂದರೆ ಕೇವಲ ಬಹುಮತದ ಆಡಳಿತ ಅಥವಾ ವೋಟ್ ಹಾಕಿ ಶಾಸನಸಭೆಯಲ್ಲಿ ಚರ್ಚೆ ಮಾಡುವುದಷ್ಟೇ ಅಲ್ಲ, ಅದೊಂದು ಸುಸ್ಥಿರ ಜೀವನ ಮಾರ್ಗ ಮತ್ತು ಪದ್ಧತಿಯಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರು ಪ್ರಜಾಪ್ರಭುತ್ವವನ್ನು ಸಾಮಾಜಿಕ ಮತ್ತು ಆರ್ಥಿಕ ವಲಯಗಳಿಗೆ ವಿಸ್ತರಿಸಿ ನೈಜ ವ್ಯಾಖ್ಯಾನ ನೀಡಿದ್ದಾರೆ. ಪ್ರಜಾಪ್ರಭುತ್ವ ಎಂದರೆ ಸ್ವಾತಂತ್ರ ?ಯ, ಸಮಾನತೆ, ಭ್ರಾತೃತ್ವ, ವೈಜ್ಞಾನಿಕ ಮನೋಭಾವ, ಜಾತ್ಯತೀತತೆ ಹಾಗೂ ಇತರರ ವಿಚಾರಗಳನ್ನು ಗೌರವಿಸುವ ಸಂಗತಿಯಾಗಿದೆ. ಪ್ರಜಾಪ್ರಭುತ್ವದ ಬೇರುಗಳು ಗಟ್ಟಿಯಾಗಲು ಕುಟುಂಬವೇ ಮೊದಲ ಪಾಠಶಾಲೆಯಾಗಬೇಕು. ಜೊತೆಗೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ಚುನಾಯಿತ ಪ್ರತಿನಿಧಿಗಳಿಗೆ ಸೂಕ್ತ ನಾಯಕತ್ವ ಹಾಗೂ ಸಾರ್ವಜನಿಕ ಸೇವೆಯ ತರಬೇತಿ ನೀಡುವ ಶಾಲೆಗಳು ಆರಂಭವಾಗಬೇಕಿದೆ. ಇಂಗ್ಲೆಂಡ್ ದೇಶಕ್ಕಿಂತಲೂ ಮುಂಚಿತವಾಗಿ 12ನೇ ಶತಮಾನದಲ್ಲೇ ನಮ್ಮ ಶರಣರು ಬಸವಣ್ಣನವರ ನಾಯಕತ್ವದಲ್ಲಿ 'ಅನುಭವ ಮಂಟಪ'ದ ಮೂಲಕ ಜಾಗತಿಕ ಪ್ರಜಾಪ್ರಭುತ್ವದ ಕಲ್ಪನೆಯನ್ನು ನೀಡಿದ್ದರು. ಇಂದಿನ ಯುವಜನತೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಅಜ್ಜಪ್ಪ ಸೊಗಲದ ಸಂವಿಧಾನ ಪೀಠಿಕೆಯನ್ನು ಬೋಧಿಸಿದರು. ಯುವ ಸಂಸತ್ ಸ್ಪರ್ಧೆ ಕುರಿತಾದ ಪೋಸ್ಟರ್‌ಗಳನ್ನು ವೇದಿಕೆ ಮೇಲಿನ ಗಣ್ಯರು ಬಿಡುಗಡೆಗೊಳಿಸಿದರು. ಗಾಯಕರಾದ ಹನುಮಂತಪ್ಪ ಬಡಿಗೇರ ಹಾಗೂ ಸಂಗಡಿಗರು ನಾಡಗೀತೆ ಕಾರ್ಯಕ್ರಮ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರಸನ್ನ ಗಡಾದ್, ಜಿಲ್ಲಾ ಪಂಚಾಯತಿ ಉಪಕಾರ್ಯದರ್ಶಿ ಟಿ.ಕೃಷ್ಣಮೂರ್ತಿ, ಭಾಗ್ಯನಗರ ಪಟ್ಟಣ ಪಂಚಾಯತಿ ಅಧ್ಯಕ್ಷರಾದ ರಮೇಶ ಹ್ಯಾಟಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಮಂಜುನಾಥ ಗೊಂಡಬಾಳ, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಇತರೆ ಮುಖಂಡರು ಉಪಸ್ಥಿತರಿದ್ದರು.

## ಬಿ ಖಾತಾದಿಂದ ಎ ಖಾತೆಗೆ ಪರಿವರ್ತನೆಗೆ ಗಡುವು ವಿಸ್ತರಿಸಿದ ಸರ್ಕಾರ




ಬೆಂಗಳೂರು: ಬಿ ಖಾತಾ ಆಸ್ತಿ ಮಾಲೀಕರಿಗೆ ಕರ್ನಾಟಕ ಸರ್ಕಾರ ಮತ್ತೊಂದು ಅವಕಾಶ ನೀಡಿದ್ದು, ಬಿ ಖಾತಾದಿಂದ ಎ ಖಾತಾಗೆ ಪರಿವರ್ತಿಸಿಕೊಳ್ಳುವ ವಿಶೇಷ ಯೋಜನೆಯ ಅವಧಿಯನ್ನು 2027ರ ಡಿಸೆಂಬರ್ 31ರವರೆಗೆ ವಿಸ್ತರಿಸಿದೆ. ಬೆಂಗಳೂರು ಮಾತ್ರವಲ್ಲದೆ ರಾಜ್ಯದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿರುವ ಅರ್ಹ ಆಸ್ತಿ ಮಾಲೀಕರಿಗೆ ಈ ನಿರ್ಧಾರದಿಂದ ಅನುಕೂಲವಾಗಲಿದೆ. ಬಹುಕಾಲದಿಂದ ಬಿ ಖಾತಾ ಸಮಸ್ಯೆ ಎದುರಿಸುತ್ತಿರುವ ಆಸ್ತಿ ಮಾಲೀಕರಿಗೆ ಇದು ಮಹತ್ವದ ಬೆಳವಣಿಗೆಯಾಗಿದೆ.

ಈ ಯೋಜನೆಯಿಂದಾಗಿ ಬೆಂಗಳೂರಿನಲ್ಲೇ ಲಕ್ಷಾಂತರ ಆಸ್ತಿ ಮಾಲೀಕರಿಗೆ ಕಾನೂನುಬದ್ಧ ಹಕ್ಕು, ಬ್ಯಾಂಕ್ ಸಾಲ ಸೌಲಭ್ಯ ಹಾಗೂ ಆಸ್ತಿ ಮಾರಾಟಕ್ಕೆ ಎದುರಾಗಿದ್ದ ತೊಡಕುಗಳು ನಿವಾರಣೆಯಾಗಲಿವೆ.ಬಿ ಖಾತಾ ಇರುವ ಕಾರಣ ಬ್ಯಾಂಕ್ ಸಾಲ ಪಡೆಯುವುದು, ಆಸ್ತಿ ಮಾರಾಟ ಅಥವಾ ವರ್ಗಾವಣೆ ಸೇ–ರಿದಂತೆ ಹಲವು ವ್ಯವಹಾರಗಳಲ್ಲಿ ತೊಡಕು ಎದುರಾಗುತ್ತಿತ್ತು. ಇದೀಗ ಸರ್ಕಾರ ನಿಗದಿಪಡಿಸಿರುವ ನಿಯಮಗಳಿಗೆ ಒಳಪಡುವ ಆಸ್ತಿಗಳನ್ನು ಎ ಖಾತಾಗೆ ಪರಿವರ್ತಿಸಿಕೊಳ್ಳಲು ಹೆಚ್ಚುವರಿ ಕಾಲಾವಕಾಶ ಸಿಕ್ಕಿದೆ.

**ಹಿಂದಿನ ಗಡುವಿಗೂ ವಿಸ್ತರಣೆ**

ಬಿ ಖಾತಾ ಆಸ್ತಿಗಳನ್ನು ನಿಯಮಬದ್ಧ ಪ್ರಕ್ರಿಯೆ ಮೂಲಕ ಎ ಖಾತಾಗೆ ತರಲು ಸರ್ಕಾರ ರೂಪಿಸಿದ್ದ ವ್ಯವಸ್ಥೆಯಡಿ ಈ ಹಿಂದೆ ನಿಗದಿಪಡಿಸಿದ್ದ ಅವಧಿಯೊಳಗೆ ಅರ್ಜಿ ಸಲ್ಲಿಸಲು ಸಾಧ್ಯವಾಗದವರಿಗೆ ಗಡುವು ವಿಸ್ತರಣೆ ಮಹತ್ವದ್ದಾಗಿದೆ. ಅನಧಿಕೃತ ಅಥವಾ ನಿಯಮ ಉಲ್ಲಂಘನೆಯ ಕಟ್ಟಡಗಳು ಮತ್ತು ನಿವೇಶನಗಳಿಗೆ ಖಾತಾ ನೀಡುವ ವಿಚಾರದಲ್ಲಿ ಸರ್ಕಾರಗಳು ಕಾಲಕಾಲಕ್ಕೆ ನಿಯಮ, ದಂಡ ಹಾಗೂ ಸಕ್ರಮ ಪ್ರಕ್ರಿಯೆಗಳನ್ನು ಜಾ–ರಿಗೊಳಿಸುತ್ತ ಬಂದಿವೆ. ಇತ್ತೀಚಿನ ದಿನಗಳಲ್ಲಿ ಬಿ ಖಾತಾದಿಂದ ಎ ಖಾತಾ ಪರಿವರ್ತನೆಗೆ ಸರ್ಕಾರ ನೀಡಿರುವ ಅವಕಾಶವನ್ನು ಆಸ್ತಿ ಮಾಲೀಕರಿಗೆ ಕಾನೂನುಬದ್ಧ ದಾಖಲೆಗಳನ್ನು ಸರಿಪಡಿಸಿಕೊಳ್ಳುವ ಅವಕಾಶವಾಗಿ ನೋಡಲಾಗುತ್ತಿದೆ.

**1,000 ಚದರ ಮೀಟರ್‌ವರೆಗೆ ಮಾತ್ರ**

ಸರ್ಕಾರದ ಪ್ರಸ್ತುತ ವ್ಯವಸ್ಥೆಯಡಿ ನಗರ ಸ್ಥಳೀಯ ಸಂಸ್ಥೆ ಅಥವಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಗರಿಷ್ಠ 1,000 ಚದರ ಮೀಟರ್, ಅಂದರೆ ಸುಮಾರು 10,764 ಚದರ ಅಡಿ ವಿಸ್ತೀರ್ಣದ ಆಸ್ತಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಆದರೆ ಕೇವಲ ವಿಸ್ತೀರ್ಣದ ಮಿತಿ ಪೂರೈಸಿದರೆ ಸಾಕಾಗುವುದಿಲ್ಲ. ಆಸ್ತಿ ಕಷಿಯೇತರ ಉದ್ದೇಶಕ್ಕೆ ಬಳಕೆಯಾಗುತ್ತಿರಬೇಕು. ಜತೆಗೆ ಸಂಬಂಧಪಟ್ಟ ಪ್ರದೇಶದ ಮಾಸ್ಟರ್ ಪ್ಲಾನ್, ವಲಯ ನಿಯಮಗಳು ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ನಿಯಮಗಳಿಗೆ ಆಸ್ತಿ ಹೊಂದಿಕೆಯಾಗಿರಬೇಕು.

**ಕಟ್‌ಆಫ್ ದಿನಾಂಕ**

ಅರ್ಹತೆ ನಿರ್ಧರಿಸುವಲ್ಲಿ ಕಟ್‌ಆಫ್ ದಿನಾಂಕ ಪ್ರಮುಖವಾಗಿದ್ದು, ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ಪ್ರತ್ಯೇಕ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.ನಗರ ಪ್ರದೇಶಗಳಲ್ಲಿ: 2024ರ ಸೆಪ್ಟೆಂಬರ್ 10ರಂದು ಅಥವಾ ಅದಕ್ಕೂ ಮೊದಲು ಬಿ' ಖಾತಾ ಹೊಂದಿರುವ ಆಸ್ತಿಗಳು ಅರ್ಹತೆಯ ವ್ಯಾಪ್ತಿಗೆ ಬರಲಿವೆ.

**ಗ್ರಾಮೀಣ ಪ್ರದೇಶಗಳಲ್ಲಿ:**

2025ರ ಏಪ್ರಿಲ್ 7ರಂದು ಅಥ–'ವಾ ಅದಕ್ಕೂ ಮೊದಲು ಬಿ' ಖಾತಾ ದಾಖಲಾಗಿರಬೇಕು.ಖಾತಾ ಇಲ್ಲದ ಆಸ್ತಿಗಳ ವಿಷಯದಲ್ಲಿಯೂ ನಿರ್ದಿಷ್ಟ ಷರತ್ತುಗಳಿದ್ದು, ಸಂಬಂಧಪಟ್ಟ ಕಟ್‌ಆಫ್ ದಿನಾಂಕಕ್ಕೂ ಮುನ್ನ ನೋಂದಾಯಿತ ವಹಿವಾಟು ನಡೆದಿರುವುದು ಸೇರಿದಂತೆ ಅಗತ್ಯ ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ.

**ದಾಖಲೆಗಳ ಡಿಜಿಟಲ್ ಪರಿಶೀಲನೆ :**

ಈ ಬಾರಿ ಪ್ರಕ್ರಿಯೆಯಲ್ಲಿ ದಾಖಲೆಗಳ ಪರಿಶೀಲನೆಗೆ ಡಿಜಿಟಲ್ ವ್ಯವಸ್ಥೆಗೆ ಒತ್ತು ನೀಡಲಾಗಿದೆ. ಆರ್‌ಟಿಸಿ, ಮ್ಯುಟೇಶನ್ ದಾಖಲೆಗಳು, ಎ/ಬಿ ಖರಾಬು ವಿವರಗಳು, ಪಹಣಿ ಹಾಗೂ ಆಸ್ತಿಯ ಮೇಲಿನ ಹಕ್ಕು–ಬಾಧ್ಯತೆ ಸೇರಿದಂತೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ. ನಗರ ಪ್ರದೇಶಗಳಲ್ಲಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿ ಅಭಿವದ್ಧಿ ಅಧಿಕಾರಿಗಳು ಅರ್ಜಿಗಳನ್ನು ಪರಿಶೀಲಿಸುವ ಜವಾಬ್ದಾರಿ ಹೊಂದಿರುತ್ತಾರೆ. ಸರ್ಕಾರ ನಿಗದಿಪಡಿಸಿರುವ ಪರಿವರ್ತನಾ ಶುಲ್ಕ, ದಂಡ ಮತ್ತು ತೆರಿಗೆಗಳನ್ನು ಪಾವತಿಸಿದ ಬಳಿಕ ಅರ್ಹ ಆಸ್ತಿಗಳಿಗೆ ಎ' ಖಾತಾ ನೀಡುವ ಪ್ರಕ್ರಿಯೆ ನಡೆಯಲಿದೆ.


**ಆಸ್ತಿ ಮಾಲೀಕರಿಗೆ ಏನು ಲಾಭ?**

ಎ ಖಾತಾ ದೊರೆತ ಬಳಿಕ ಆಸ್ತಿಯ ದಾಖಲೆಗಳ ಸ್ಥಿತಿ ಸುಧಾರಿಸುವುದರ ಜತೆಗೆ ಬ್ಯಾಂಕ್ ಸಾಲ, ಅಡಮಾನ ಸಾಲ, ಆಸ್ತಿ ಮಾರಾಟ ಮತ್ತು ವರ್ಗಾವಣೆಯಂತಹ ವ್ಯವಹಾರಗಳಲ್ಲಿ ಎದುರಾಗುವ ಹಲವು ತೊಡಕುಗಳು ಕಡಿಮೆಯಾಗುವ ನಿರೀಕ್ಷೆಯಿದೆ. ಆದರೆ ಎ' ಖಾತಾ ದೊರೆತ ತಕ್ಷಣ ಆಸ್ತಿ ಸಂಪೂರ್ಣವಾಗಿ ಎಲ್ಲ ರೀತಿಯ ಕಾನೂನು ಉಲ್ಲಂಘನೆಗಳಿಂದ ಮುಕ್ತವಾಗಿದೆ ಎಂದಥ–'ರ್ವಲ್ಲ. ಭೂಮಿಯ ಮಾಲೀಕತ್ವ, ಭೂಬಳಕೆ, ಕಟ್ಟಡ ನಿಯಮ, ಮಾಸ್ಟರ್ ಪ್ಲಾನ್ ಮತ್ತು ಇತರ ಕಾನೂನುಬದ್ಧ ಅನುಮತಿಗಳು ಪ್ರತ್ಯೇಕವಾಗಿ ಅನ್ವಯಿಸುತ್ತವೆ ಎಂಬುದನ್ನು ಆಸ್ತಿ ಮಾಲೀಕರು ಗಮನಿಸಬೇಕಾಗಿದೆ. 2027ರ ಡಿಸೆಂಬರ್ 31ರವರೆಗೆ ಗಡುವು ವಿಸ್ತರಣೆಯಾಗಿರುವುದು ಅರ್ಹ ಆಸ್ತಿ ಮಾಲೀಕರಿಗೆ ದಾಖಲೆಗಳನ್ನು ಸರಿಪಡಿಸಿಕೊಳ್ಳಲು ಹೆಚ್ಚುವರಿ ಸಮಯ ನೀಡಿದಂತಾಗಿದೆ. ಆದರೆ ಈ ಅವಕಾಶವನ್ನು ಸರ್ಕಾರಿ ಭೂಮಿ, ಕೆರೆ, ರಾಜಕಾಲುವೆ ಅಥವಾ ಸಾರ್ವಜನಿಕ ಜಾಗಗಳನ್ನು ಸಕ್ರಮಗೊಳಿಸುವ ಮಾರ್ಗ ಎಂದು ಪರಿಗಣಿಸಲು ಸಾಧ್ಯವಿಲ್ಲ. ಹೀಗಾಗಿ ಬಿ ಖಾತಾ ಹೊಂದಿರುವವರು ಮೊದಲು ತಮ ಆಸ್ತಿಯ ದಾಖಲೆಗಳು, ಕಟ್‌ಆಫ್ ದಿನಾಂಕ, ಭೂಬಳಕೆ, ವಿಸ್ತೀರ್ಣ ಹಾಗೂ ಮಾಸ್ಟರ್ ಪ್ಲಾನ್‌ಗೆ ಹೊಂದಾಣಿಕೆ ಪರಿಶೀಲಿಸಿ, ಸರ್ಕಾರ ನಿಗದಿಪಡಿಸಿರುವ ಶುಲ್ಕ ಮತ್ತು ಪ್ರಕ್ರಿಯೆಯಂತೆ ಅರ್ಜಿ ಸಲ್ಲಿಸುವುದು ಮುಖ್ಯವಾಗಿದೆ. ,ಬೆಂಗಳೂರಿನಿಂದ ಹಿಡಿದು ರಾಜ್ಯದ ವಿವಿಧ ನಗರ ಮತ್ತು ಗ್ರಾಮೀಣ ಪ್ರದೇಶಗಳವರೆಗೆ ಬಿ ಖಾತಾ ಸಮಸ್ಯೆ ಎದು–ರಿಸುತ್ತಿರುವ ಅರ್ಹ ಆಸ್ತಿ ಮಾಲೀಕರಿಗೆ ಸರ್ಕಾರದ ಗಡುವು ವಿಸ್ತರಣೆ ದಾಖಲೆಗಳನ್ನು ಕ್ರಮಬದ್ಧಗೊಳಿಸಿಕೊಳ್ಳಲು ಮಹತ್ವದ ಅವಕಾಶವಾಗಿದೆ. ಆದರೆ ಅರ್ಹತೆ ಮತ್ತು ಕಾನೂನುಬದ್ಧ ಷರತ್ತುಗಳನ್ನು ಮೀರಿ ಯಾ–ರಿಗೂ ಎ ಖಾತಾ ಸಿಗುವುದಿಲ್ಲ ಎಂಬುದು ಈ ಯೋಜನೆಯ ಪ್ರಮುಖ ಅಂಶವಾಗಿದೆ

**ಯಾವ ಆಸ್ತಿಗಳಿಗೆ ಈ ಸೌಲಭ್ಯ ಅನ್ವಯಿಸುವುದಿಲ್ಲ**

ಬಿ–ಖರಾಬು ಜಮೀನು ಅರಣ್ಯ ಅಥ–'ವಾ ಗೋಮಾಳ ಭೂಮಿ ಕೆರೆ ಮತ್ತು ಕೆರೆ ಅಂಗಳದ ಜಾಗಗಳು ರಾಜಕಾಲುವೆಗಳು, ನಾಲಾಗಳು ರಸ್ತೆಗಳು ಹಾಗೂ ರಸ್ತೆ ಬದಿಯ ಮೀಸಲು ಜಾಗ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟ ಜಾಗಗಳು ಭೂಸ್ವಾಧೀನ ಪ್ರಕ್ರಿಯೆಯಲ್ಲಿರುವ ಆಸ್ತಿಗಳು. ನ್ಯಾಯಾಲಯ ಅಥವಾ ಟ್ರಿಬ್ಯೂನಲ್‌ಗಳಲ್ಲಿ ವ್ಯಾಜ್ಯದಲ್ಲಿರುವ ಆಸ್ತಿಗಳು. ಸರ್ಕಾರದ ನಿರ್ಬಂಧಗಳಿರುವ ಹಾಗೂ ಮಾಸ್ಟರ್ ಪ್ಲಾನ್ ನಿಯಮಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿರುವ ಆಸ್ತಿಗಳಿಗೆ ಅವಕಾಶವಿಲ್ಲ.

## ಮನೆಯ ಹಿತ್ತಲಿಗೆ ನುಗ್ಗಿ ನೀರು ಕುಡಿದ ಚಿರತೆ ; ಗ್ರಾಮಸ್ಥರಲ್ಲಿ ಆತಂಕ



ಚಿಕ್ಕಮಗಳೂರು: ಕಾಫಿನಾಡಿನ ಬಯಲು ಭಾಗದಲ್ಲಿ ಚಿರತೆಗಳ ಓಡಾಟ ಮುಂದುವರಿದಿದ್ದು, ಕಡೂರು ತಾಲೂಕಿನ ನಾರಾಯಣಪುರ ಗ್ರಾಮದಲ್ಲಿ ಮನೆಯ ಹಿತ್ತಲಿಗೆ ನುಗ್ಗಿದ ಚಿರತೆ ನೀರು ಕುಡಿದು ತೆರಳಿದೆ. ಮನೆಯ ಆವರಣದಲ್ಲಿ ಚಿರತೆ ಓಡಾಡಿ ನೀರು ಕುಡಿಯುತ್ತಿರುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

ಪ್ರಭಾಕರ್ ಎಂಬುವವರ ಮನೆಯ ಹಿಂಭಾಗದಲ್ಲಿ ಚಿರತೆ ಕಾಣಿಸಿಕೊಂಡಿದ್ದು, ಯಾವುದೇ ಆತಂಕವಿಲ್ಲದೆ ಆವರಣದಲ್ಲಿ ಸಂಚರಿಸಿದೆ. ಪದೇಪದೇ ಚಿರತೆಗಳ ಓಡಾಟ ಕಂಡುಬರುತ್ತಿರುವುದರಿಂದ ಗ್ರಾಮಸ್ಥರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ರಾತ್ರಿ ವೇಳೆ ಮನೆಗಳಿಂದ ಹೊರಬರಲು ಹಾಗೂ ಜಮೀನುಗಳಿಗೆ ತೆರಳಲು ಜನರು ಆತಂಕ ಪಡುತ್ತಿದ್ದಾರೆ. ಅನಾಹುತ ಸಂಭವಿಸುವ ಮುನ್ನ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆಯ ಚಲನವಲನದ ಮೇಲೆ ನಿಗಾ ವಹಿಸಿ, ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಪಂಪ್‌ಹೌಸ್ ಮೇಲೆ ಚಿರತೆ ಪ್ರತ್ಯಕ್ಷ; ರೈತರಲ್ಲಿ ಆತಂಕ ಕೊಡಿಗೇನಹಳ್ಳಿ, –ಹೋಬಳಿಯ ಬೂದೇನಹಳ್ಳಿ ಗ್ರಾಮದ ಹೊರವಲಯದಲ್ಲಿ ಚಿರತೆ ಕಾಣಿಸಿಕೊಂಡಿದ್ದು, ಸುತ್ತಮುತ್ತಲಿನ ಗ್ರಾಮಸ್ಥರಲ್ಲಿ ಆತಂಕ ಹೆಚ್ಚಾಗಿದೆ. ಮೂರು ದಿನಗಳಿಂದ ಜಮೀನುಗಳ ಬಳಿ ಚಿರತೆ ಓಡಾಡುತ್ತಿರುವುದು ಕಂಡುಬರುತ್ತಿದೆ. ವಕೀಲ ಆದಿನಾರಾಯಣಪ್ಪ ಅವರ ಜಮೀನಿನ ಪಂಪ್‌ಹೌಸ್ ಮೇಲೆ ಚಿರತೆ ಕಾಣಿಸಿಕೊಂಡಿದ್ದು, ರೈತರೊಬ್ಬರು ಅದರ ದೃಶ್ಯವನ್ನು ಫೋಟೋದಲ್ಲಿ ಸೆರೆಹಿಡಿದಿದ್ದಾರೆ. ಈ ಭಾಗದಲ್ಲಿ ನಿತ್ಯ ನಾಲ್ಕೈದು ಚಿರತೆಗಳು ಕಾಣಿಸಿಕೊಳ್ಳುತ್ತಿದ್ದು, ಇದೀಗ ಬೂದೇನಹಳ್ಳಿ ಕಡೆಗೂ ಚಿರತೆಗಳ ಸಂಚಾರ ಕಂಡುಬಂದಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ. ಚಿರತೆಗಳು ನಾಯಿ, ಕುರಿ ಹಾಗೂ ಮೇಕೆಗಳನ್ನು ಬೇಟೆಯಾಡುತ್ತಿರುವುದರಿಂದ ಜನರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಸಂಜೆ ವೇಳೆಯಲ್ಲಿ ಜಮೀನುಗಳಿಗೆ ತೆರಳಿ ಕೃಷಿ ಚಟುವಟಿಕೆ ನಡೆಸಲು ಹಾಗೂ ಜಾನುವಾರುಗಳನ್ನು ಮೇಯಿಸಲು ರೈತರು ಹಿಂದೇಟು ಹಾಕುವಂತಾಗಿದೆ. ಈ ಕುರಿತು ವಲಯ ಅರಣ್ಯಾಧಿಕಾರಿ ಎಚ್. ಎಂ. ಸುರೇಶ್ ಮಾತನಾಡಿ, ದೊಡ್ಡಮಾಲೂರು ಗ್ರಾಮದ ಹೊರವಲಯದಲ್ಲಿ ಚಿರತೆ ಕಾಣಿಸಿಕೊಂಡಿರುವ ಬಗ್ಗೆ ಮಾಹಿತಿ ಇದೆ. ಇದೀಗ ಬೂದೇನಹಳ್ಳಿಯಲ್ಲೂ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆ ನಡೆಸಿ, ಅಗತ್ಯವಿದ್ದಲ್ಲಿ ಬೋನು ಇರಿಸಲಾಗುವುದು ಎಂದು ತಿಳಿಸಿದ್ದಾರೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

## 100 ದಿನ ಪೂರೈಸಿದ ಡಿಕೆಶಿ ಸರ್ಕಾರದ ಮೌಲ್ಯಮಾಪನಕ್ಕೆ ಮುಂದಾದ 'ಕೈ'ಕಮಾಂಡ್



ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸರ್ಕಾರಕ್ಕೆ 100 ದಿನ ಭರ್ತಿಯಾದ ಸಂದರ್ಭದಲ್ಲಿ ಸಚಿವರ ಮೌಲ್ಯಮಾಪನಕ್ಕೆ ಹೈಕಮಾಂಡ್ ಮುಂದಾಗಿದೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ನಾಯಕ ರಣದೀಪ್ ಸಿಂಗ್ ಸುರ್ಜೇವಾಲ ಇಂದು ಬೆಂಗಳೂರಿಗೆ ಆಗಮಿಸುತ್ತಿದ್ದು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಇತರ ಪ್ರಮುಖರ ಜೊತೆ ಚರ್ಚೆ ನಡೆಸಲಿದ್ದಾರೆ.

ಡಿ.ಕೆ.ಶಿವಕುಮಾರ್ ಅವರ ಸರ್ಕಾರ ಇತ್ತೀಚೆಗೆ ಅದ್ದೂರಿಯಾದ ಶತದಿನೋತ್ಸವ ಆಚರಿಸಿಕೊಂಡಿದೆ. ಆದರೆ ಸಂಪುಟದ ಬಹುತೇಕ ಸಚಿವರು ಇನ್ನೂ ತಮ ಇಲಾಖೆಯ ಕಾರ್ಯಭಾರಗಳನ್ನೇ ವಹಿಸಿಕೊಂಡಿಲ್ಲ. ಹೀಗಾಗಿ ಹೈಕಮಾಂಡ್ ತೀವ್ರ ಅಸಮಾಧಾನ ಹೊಂದಿದೆ ಎಂದು ಹೇಳಲಾಗುತ್ತಿದೆ.ಬರ ನಿರ್ವಹಣೆ ವಿಚಾರವಾಗಿಯೂ ಕೆಲ ಸಚಿವರು ನಿರ್ಲಕ್ಷ್ಯ ವಹಿಸಿದ್ದು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕಠಿಣ ಸೂಚನೆಗೂ ಕ್ಯಾರೆ ಎನ್ನುತ್ತಿಲ್ಲ. ಈ ಹಿನ್ನೆಲೆಯಲ್ಲಿ ಹೈಕಮಾಂಡ್ ಖುದ್ದು ಅಖಾಡಕ್ಕಿಳಿದಿದೆ. ಮುಖ್ಯಮಂತ್ರಿಯವರ ಜೊತೆ ಚರ್ಚೆ ನಡೆಸುವ ವೇಳೆಯಲ್ಲಿ ಸಂಪುಟ ಸಚಿವರ ಕಾರ್ಯವೈಖರಿ ಬಗ್ಗೆ ಸಮಗ್ರ ಮಾಹಿತಿ ಕಲೆ ಹಾಕಲಾಗುತ್ತದೆ ಎಂಬ ಮಾಹಿತಿ ಇದೆ. ಈ ನಿಟ್ಟಿನಲ್ಲಿ ಈಗಾಗಲೇ ಅನೌಪಚಾರಿಕ ಸಂದೇಶ ರವಾನೆಯಾಗಿದ್ದು, ಇಲಾಖಾವಾರು ಸಚಿವರ ಸಾಧನೆಯ ವರದಿಯನ್ನು ಸಜ್ಜುಗೊಳಿಸುವಂತೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.ಸರ್ಕಾರಕ್ಕೆ ಇನ್ನೂ ಒಂದು ವರ್ಷ 8 ತಿಂಗಳು ಮಾತ್ರ ಕಾಲಾವಧಿ ಇದೆ. ಅಷ್ಟರಲ್ಲಿ ಉತ್ತಮವಾಗಿ ಕೆಲಸ ನಿರ್ವಹಿಸಿ ಜನ ಮನ್ನಣೆಗಳಿಸುವುದು ದೊಡ್ಡ ಸವಾಲು. ಅಧಿಕಾರ ಹಸ್ತಾಂತರ ಪರ್ವ ಪಕ್ಷಕ್ಕೆ ಹಾನಿ ಮಾಡಿದೆ. ಸಿದ್ದರಾಮಯ್ಯ ಅವರ ಪದಚ್ಯುತಿ ಪರಿಣಾಮ ಬಗ್ಗೆ ಹೈಕಮಾಂಡ್ ಚಿಂತೆಗೀಡಾಗಿದೆ. ಅದನ್ನು ಸರಿದೂಗಿಸಬೇಕಾದರೆ ಸರ್ಕಾರದ ಉತ್ತಮ ಕಾರ್ಯ ನಿರ್ವಹಣೆ ಅತ್ಯಗತ್ಯ ಎಂಬ ನಿಲುವನ್ನು ಹೈಕಮಾಂಡ್ ಹೊಂದಿದೆ.

ಡಿ.ಕೆ.ಶಿವಕುಮಾರ್ ಅವರು ಧಾವಂತದಲ್ಲಿಯೇ ಕೆಲಸ ನಿರ್ವಹಿಸುತ್ತಿದ್ದಾರೆ. ಅದರೆ ಕೆಲವು ಸಚಿವರು ತಮ ಧೋರಣೆಯನ್ನು ಬದಲಾಯಿಸಿಕೊಂಡಿಲ್ಲ. ಎಂದಿನಂತೆ ದರ್ಪ್ಪಚರ್ಮದವರಂತೆ ವರ್ತಿಸುತ್ತಿದ್ದಾರೆ ಎಂಬ ಆರೋಪಗಳಿವೆ. ಒಂದೆಡೆ ಸಚಿವ ಸ್ಥಾನ ಸಿಗದೇ ಅಸಮಾಧಾನಗೊಂಡಿರುವ ಶಾಸಕರ ಬಹಿರಂಗ ಹೇಳಿಕೆಗಳು, ಟೀಕೆಗಳು ಪಕ್ಷಕ್ಕೆ ಮುಜುಗರ ಉಂಟುಮಾಡುತ್ತಿವೆ. ಮತ್ತೊಂದೆಡೆ ಸಚಿವರ ಉಡಾಫೆತನ ಮುಂದಿನ ಚುನಾವಣೆ ಮೇಲೆ ಕೆಟ್ಟ ಪರಿಣಾಮ ಬೀರಬಹುದು ಎಂಬ ಲೆಕ್ಕಾಚಾರಗಳಿವೆ. ಈ ಹಂತದಲ್ಲಿ ಮತ್ತೊಮೆ ಸಂಪುಟ ಪುನರ್ ರಚನೆ ಕಷ್ಟಸಾಧ್ಯ. ಅದಕ್ಕಾಗಿ ಸಚಿವರನ್ನು ಕಾಲ ಕಾಲಕ್ಕೆ ಮೌಲ್ಯಮಾಪನಕ್ಕೊಳಪಡಿಸಿ ಜಾಗೃತವಾಗಿಡಲು ಪ್ರಯತ್ನಿಸಲಾಗುತ್ತಿದೆ ಎಂದು ಹೇಳಲಾಗಿದೆ.

ಬೆಂಗಳೂರಿಗೆ ಆಗಮಿಸುವ ರಣದೀಪ್ ಸಿಂಗ್ ಸುರ್ಜೇವಾಲ ಪ್ರಮುಖವಾಗಿ ಡಿ.ಕೆ.ಶಿವಕುಮಾರ್ ಮತ್ತು ಬಿ.ಕೆ.ಹರಿಪ್ರಸಾದ್ ನಡುವೆ ಉಂಟಾಗಿರುವ ವೈಮನಸ್ಯವನ್ನು ಸರಿಪಡಿಸಲು ಪ್ರಯತ್ನಿಸಲಿದ್ದಾರೆ ಎಂದು ಹೇಳಲಾಗಿದೆ.ಶತದಿನೋತ್ಸವಕ್ಕೆ ತಮನ್ನು ಕಡೆಗಣಿಸಿರುವ ಕುರಿತು ಬಿ.ಕೆ.ಹರಿಪ್ರಸಾದ್ ಅಸಮಾಧಾನ ಹೊಂದಿದ್ದಾರೆ. ಈ ನಿಟ್ಟಿನಲ್ಲಿ ಅವರ ಜೊತೆ ರಣದೀಪ್ ಸಿಂಗ್ ಸುರ್ಜೇವಾಲ ಚರ್ಚೆ ನಡೆಸಲಿದ್ದಾರೆ. ಮುಖ್ಯಮಂತ್ರಿಯವರ ಜೊತೆಗೂ ಮಾತುಕತೆಗಳು ನಡೆಯಲಿವೆ. ಇದೇ ವೇಳೆ ಸಚಿವ ಸಂಪುಟದಲ್ಲಿ ಖಾಲಿಯಿರುವ 2 ಸ್ಥಾನಗಳಿಗೆ ನೇಮಕಾತಿ, ನಿಗಮ–ಮಂಡಳಿಗಳ ಅಧ್ಯಕ್ಷರ ಆಯ್ಕೆ ಹಾಗೂ ವಿಧಾನ ಪರಿಷತ್ತಿನಲ್ಲಿ ತೆರವಾಗಿರುವ 5 ಸ್ಥಾನಗಳಿಗೆ ಸದಸ್ಯೆಯರ ನಿಯೋಜನೆ ಸೇ–ರಿದಂತೆ ಪ್ರಮುಖ ವಿಚಾರಗಳನ್ನು ರಣದೀಪ್ ಸಿಂಗ್ ಸುರ್ಜೇವಾಲ ಪ್ರಸ್ತಾಪಿಸಲಿದ್ದಾರೆ ಎಂದು ತಿಳಿದು ಬಂದಿದೆ.ನೂರು ಕಾಂಗ್ರೆಸ್ ಕಚೇರಿಗಳ ಉದ್ಘಾಟನೆಗೆ ಶಂಕುಸ್ಥಾಪನೆಗೂ ಸಮಯ ನಿಗದಿ ಕುರಿತು ಚರ್ಚೆಯಾಗಲಿದೆ.

## ಪೆನ್‌ಡ್ರೈವ್‌ನಲ್ಲಿ ಹಣ ವಸೂಲಿ ಕುರಿತ ಮಾತುಕತೆಗಳಿವೆ : ಹೆಚ್ಡಿಕೆ

ಹೊಳೆನರಸೀಪುರ: ನಾನು ಈ ಹಿಂದೆ ತೋ–ರಿಸಿದ್ದ ಪೆನ್‌ಡ್ರೈವ್ ಖಾಲಿಯಾಗಿರಲಿಲ್ಲ. ಅದರಲ್ಲಿ ಹಣ ವಸೂಲಿ ವಿಚಾರಕ್ಕೆ ಸಂಬಂಧಿಸಿದ ಮಾತುಕತೆಗಳು ದಾಖಲಾಗಿವೆ. ಅದರಲ್ಲಿ ಯಾರ್ಯಾರ ಹೆಸರುಗಳಿವೆ ಎಂಬುದೂ ಗೊತ್ತಿದ್ದು, ಅಗತ್ಯವಿದ್ದರೆ ಆ ಪೆನ್‌ಡ್ರೈವ್ ಈಗಲೂ ನೀಡುತ್ತೇನೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಹೇಳಿದರು.

ಮಾವಿನಕೆರೆ ಬೆಟ್ಟದಲ್ಲಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ರಚನೆಯ ಆರಂಭದ ದಿನಗಳಲ್ಲೇ ಕೆಲವು ಘಟನೆಗಳು ನಡೆದಿದ್ದವು. ಆಗಲೇ ಪೆನ್‌ಡ್ರೈವ್ ನನ್ನ ಬಳಿ ಇತ್ತು. ಆದರೆ ಅದನ್ನು ಯಾವಾಗ ಬಿಡುಗಡೆ ಮಾಡಬೇಕು ಎಂಬ ಬಗ್ಗೆ ಕೆಲ ಅನುಭವಸ್ಥರು ಸಲಹೆ ನೀಡಿದ್ದರು. ಕಾಂಗ್ರೆಸ್‌ನ ಶಕ್ತಿಯನ್ನು ಯಾವ ರೀತಿಯಲ್ಲಿ ಎದುರಿಸಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದೇನೆ ಎಂದರು.

ಪೆನ್‌ಡ್ರೈವ್‌ನಲ್ಲಿ ಇಬ್ಬರು ಎಂಜಿನಿಯರ್‌ಗಳ ನಡುವಿನ ಮಾತುಕತೆ ಇದೆ. ವರ್ಗಾವಣೆ ಹಾಗೂ ಬಡ್ತಿ ಪಡೆಯಲು ಹಣ ನೀಡಿರುವ ಬಗ್ಗೆ ಅವರು ಮಾತನಾಡಿರುವುದು ದಾಖಲಾಗಿದೆ. ಬಡ್ತಿಗೆ ಹಣ ತಂದು ಸಚಿವ–ರಿಗೆ ನೀಡಿ ಬಡ್ತಿ ಪಡೆದಿರುವುದಾಗಿ ಒಬ್ಬರು ಹೇಳಿಕೊಂಡಿದ್ದಾರೆ. ಮತ್ತೊಬ್ಬರು ತಮ ತಂಡ ಹಣ ನೀಡಿ ಕೆಲಸ ಮಾಡಿಸಿಕೊಂಡಿರುವ ಬಗ್ಗೆ ಹೇಳುತ್ತಾರೆ. ಈ ವಿಚಾರವನ್ನು ನಾನು ಸುಮನೆ ಹೇಳುತ್ತಿಲ್ಲ. ಸದ್ಯದಲ್ಲೇ ಎಲ್ಲವೂ ನಿಮ ಮುಂದೆ ಬರಲಿದೆ ಎಂದು ಅವರು ಹೇಳಿದರು.



ನೀಟ್ ಪರೀಕ್ಷೆ ಪತ್ರಿಕೆ ಸೋರಿಕೆ ವಿಚಾರದಲ್ಲಿ ಕೇಂದ್ರ ಸಚಿವರ ರಾಜೀನಾಮೆ ಕೇಳಿದ್ದ ಕಾಂಗ್ರೆಸ್ ನಾಯಕರು, ರಾಜ್ಯದಲ್ಲಿ ಪ್ರತಿನಿತ್ಯ ನಡೆಯುತ್ತಿರುವ ಘಟನೆಗಳಿಗೆ ಯಾರ ರಾಜೀನಾಮೆ ಕೇಳುತ್ತಾರೆ? ಎಂದು ಪ್ರಶ್ನಿಸಿದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ ನಾಯಕ ರಾಹುಲ್ ಗಾಂಧಿ ಅವರನ್ನು ಕೇಳಿಕೊಂಡು ಬಂದ ನಂತರ ಇಲ್ಲಿ ಯಾರ ರಾಜೀನಾಮೆ ಪಡೆಯಬೇಕು ಎಂದು ಹೇಳಲಿ ಎಂದು ಅವರು ವ್ಯಂಗ್ಯವಾಡಿದರು.

# ಅಳಿಲು ಸೇವೆ

ಅಳಿಲು ಸೇವೆ ಸಲ್ಲಿಸಬೇಕು ಅನ್ನೋ ಪದವನ್ನು ನಾವು ಅಲ್ಲಲ್ಲಿ ಕೇಳ್ತಾನೆ ಇರ್ತೀವಿ. ಅಮ್ಮ ಮನೆ ಕೆಲಸ ಮಾಡುವಾಗ ಅಮ್ಮನಿಗೆ ಚಿಕ್ಕ ಪುಟ್ಟ ಸಹಾಯ ಮಾಡುವುದು, ಅಪ್ಪನಿಗೆ ಗಾಡಿ ಒರೆಸಲು ಸಹಾಯ ಮಾಡುವುದು, ಮನೆಯಲ್ಲಿರುವ ಚಿಕ್ಕ ಮಕ್ಕಳಿಗೆ ಪುಸ್ತಕಗಳನ್ನು, ಬ್ಯಾಗನ್ನು ಹೊಂದಿಸಿಕೊಳ್ಳಲು, ಹೋಮ್ ವರ್ಕ್ ಮಾಡಲು ಸಹಾಯ ಮಾಡುವುದು ಒಂದು ರೀತಿಯಲ್ಲಿ ಅಳಿಲು ಸೇವೆಗಳಲ್ಲಿಯೇ ಬರುತ್ತದೆ. ನೀವು ಮಾಡುತ್ತಿರುವ ಮಹತ್ತರವಾದ ಕೆಲಸ ಕಾರ್ಯದಲ್ಲಿ ನನ್ನದೂ ಒಂದು ಪುಟ್ಟ ಪಾಲು ಇರಲಿ ಎಂಬ ಅರ್ಥವನ್ನು ಕೊಡುವ ಈ ಪದದ ಹಿಂದೆ ಒಂದು ದೊಡ್ಡ ಕಥೆಯೇ ಇದೆ. ಅದು ತ್ರೇತಾಯುಗದ ಕಾಲ. ಚಿಕ್ಕಮ್ಮ ಕೈಕೇಯಿಗೆ ತಂದೆ ದಶರಥನು ನೀಡಿದ ಮಾತಿನಂತೆ ಆಕೆಯ ಆಶಯವನ್ನು ಈಡೇರಿಸಲು ಅಯೋಧ್ಯಾ ಅರಸ ಶ್ರೀರಾಮಚಂದ್ರ ತನ್ನ ಪತ್ನಿ ಸೀತಾದೇವಿ ಮತ್ತು ಸೋದರ ಲಕ್ಷ್ಮಣನೊಂದಿಗೆ ವನವಾಸದಲ್ಲಿ ಇದ್ದ. ಆ ಸಮಯದಲ್ಲಿ ರಾಮನನ್ನು ಕಂಡು ಮೋಹಗೊಂಡ ರಾವಣನ ತಂಗಿ ಶೂರ್ಪನಖಿಯು ತನ್ನನ್ನು ಮದುವೆಯಾಗಲು ವಿನಂತಿಸಿಕೊಂಡಾಗ ಪ್ರಭು ಶ್ರೀರಾಮನು ತಾನು ಏಕಪತ್ನಿವ್ರತಸ್ತನಾಗಿದ್ದು ಬೇಕಾದರೆ ತನ್ನ ಸಹೋದರ ಲಕ್ಷ್ಮಣನನ್ನು ಕೇಳು ಎಂದು ಹೇಳಿದನು. ಆಗ ಶೂರ್ಪನಖಿಯು ಲಕ್ಷ್ಮಣನಿಗೆ ತನ್ನನ್ನು ಮದುವೆಯಾಗುವಂತೆ ದುಂಬಾಲು ಬಿದ್ದಳು. ಹಲವಾರು ಬಾರಿ ಹೇಳಿದರೂ ಕೇಳದ ಶೂರ್ಪನಖಿಯನ್ನು ದೂರ ಸರಿಸಲು ಲಕ್ಷ್ಮಣನು ಮಾಡಿದ ಪ್ರಯತ್ನದ ಫಲವೇ ಆಕೆಯ ಮೂಗು ಕತ್ತರಿಸಲು ಕಾರಣವಾಯಿತು. ಇದರಿಂದ ಖತಿಗೊಂಡ ಶೂರ್ಪನಖಿಯು ಸ್ವರ್ಣ ಲಂಕೆಗೆ ತೆರಳಿ ತನ್ನ ಸಹೋದರ ರಾವಣನಿಗೆ ರಾಮ ಲಕ್ಷ್ಮಣರ ವಿರುದ್ಧ ದೂರು ಹೇಳಿದಳು. ಕೃದ್ಧನಾದ ರಾವಣನು ತನ್ನ ತಂಗಿ ಶೂರ್ಪನಖಿಗೆ ಆದ ಅವಮಾನದ ವಿರುದ್ಧ ಸೇಡು ತೀರಿಸಿಕೊಳ್ಳಲು ರಾಮನ ಪತ್ನಿ ಸೀತಾದೇವಿಯನ್ನು ಸ್ವರ್ಣಲಂಕೆಗೆ ಅಪಹರಿಸಿಕೊಂಡೊಯ್ದು ಅಶೋಕವನದಲ್ಲಿ ಇಟ್ಟಿದ್ದನು.

ಸೀತೆಯನ್ನು ಕಳೆದುಕೊಂಡ ಶ್ರೀರಾಮಚಂದ್ರನು ತನ್ನ ಸಹೋದರ ಲಕ್ಷ್ಮಣನೊಡನೆ ಸೀತೆಯನ್ನು ಹುಡುಕುತ್ತಾ ಕಿಷ್ಕಿಂದೆಯ ವಾನರ ರಾಜ ಸುಗ್ರೀವ ಮತ್ತು ಆತನ ಕಪಿ ಸೈನ್ಯದೊಂದಿಗೆ ಸಮುದ್ರದ ದಡಕ್ಕೆ ಬಂದು ಬೀಡು ಬಿಟ್ಟನು. ಸಮುದ್ರದ ಆಚೆಗೆ ಸಿರಿ ಲಂಕೆ ಮತ್ತು ಸಮುದ್ರದ ಈ ಕಡೆಯ ಭೂ ಭಾಗದಲ್ಲಿ ಪ್ರಭು ಶ್ರೀರಾಮಚಂದ್ರ ಮತ್ತು ವಾನರ ಸೇನೆ. ರಾಮನು ಸಮುದ್ರದ ನೀರನ್ನು ಹಿಂತೆಗೆದುಕೊಂಡು ಸಮುದ್ರದ ಮಧ್ಯದಲ್ಲಿ ದಾರಿ ಕೊಡಲು ಸಮುದ್ರರಾಜನನ್ನು ಪ್ರಾರ್ಥಿಸಿ ಬಾಣ ಹೂಡಿದನು. ಕ್ಷಣಮಾತ್ರದಲ್ಲಿ ಸಮುದ್ರರಾಜನು ಪ್ರತ್ಯಕ್ಷನಾಗಿ ಪ್ರಭು



ಶ್ರೀರಾಮನಿಗೆ ವಂದಿಸಿ ಬೆಟ್ಟದ ಕಲ್ಲುಗಳನ್ನು ಸಮುದ್ರದ ಮೇಲೆ ಹಾಕಿದರೆ ಅವು ತೇಲುವಂತೆ ಮಾಡುವ ಜವಾಬ್ದಾರಿ ನನ್ನದು. ಆ ರೀತಿ ಅಗಾಧ ಸಮುದ್ರಕ್ಕೆ ಸೇತುವೆಯನ್ನು ಕಟ್ಟುವ ಕೆಲಸ ವಾನರ ಸೈನ್ಯ ನಿರ್ವಹಿಸಲಿ ಎಂದು ಹೇಳಿದನು. ಇದಕ್ಕೆ ವಾನರ ರಾಜ ಸುಗ್ರೀವನು ರಾಮನ ಅಪ್ಪಣೆಯ ಮೇರೆಗೆ ತನ್ನ ಕಪಿ ಸೈನ್ಯದೊಡನೆ ಸುತ್ತಲಿರುವ ಬೆಟ್ಟದ ಅಗಾಧ ಕಲ್ಲುಗಳನ್ನು ತಂದು ಅವುಗಳನ್ನು ಸಮತಟ್ಟಾಗಿಸಿ ಅವುಗಳ ಮೇಲೆ ಶ್ರೀ ರಾಮ ಎಂದು ಬರೆದು ನೀರಿನಲ್ಲಿ ಎಸೆದನು. ಆಶ್ಚರ್ಯ ಎಂದರೆ ಪ್ರಭು ಶ್ರೀ ರಾಮನ ಹೆಸರನ್ನು ಹೊತ್ತ ಕಲ್ಲುಗಳು ಸಮುದ್ರದ ಮೇಲೆ ತೇಲುತ್ತಾ ಒಂದಕ್ಕೊಂದು ಅಂಟಿಕೊಂಡು ಸೇತುವೆಯ ಸ್ವರೂಪವನ್ನು ಪಡೆಯಲಾರಂಭಿಸಿದವು. ಅಲ್ಲಿಯೇ ಇದ್ದು ಇದನ್ನೆಲ್ಲಾ ಗಮನಿಸುತ್ತಿದ್ದ ಪುಟ್ಟ ಅಳಿಲಿನ ಮರಿಯೊಂದು ನಾನು ಕೂಡ ಶ್ರೀರಾಮನ ಸೇವೆ ಮಾಡಬೇಕು ಆತನ ಕಾರ್ಯದಲ್ಲಿ ಸಹಕಾರಿಯಾಗಿ ನಿಲ್ಲಬೇಕು ಎಂದು ಆಶಿಸಿತು. ಆದರೆ ಆಕಾರದಲ್ಲಿ ಅತ್ಯಂತ ಚಿಕ್ಕದಾಗಿದ್ದ ಅಳಿಲು ಏನು ತಾನೆ ಸಹಾಯ ಮಾಡಲು ಸಾಧ್ಯ!!

ಕಲ್ಲನ್ನಂತು ಹೊರಲು ಸಾಧ್ಯವಿಲ್ಲ ನಿಜ. ತಕ್ಷಣ ಪುಟ್ಟ ಅಳಿಲು ಮರಿಗೆ ಒಂದು ಉಪಾಯ ಹೊಳೆಯಿತು. ಸೇತುವೆಯ ಗಾರೆಗೆ ಬೇಕಾದ ಉಸುಕನ್ನು ತರಲು ಯೋಚಿಸಿದ ಪುಟ್ಟ ಅಳಿಲ ಮರಿ ತನ್ನಿಡಿ ದೇಹವನ್ನು ನೀರಿನಲ್ಲಿ ತೋಯಿಸಿಕೊಂಡು ಸಮುದ್ರದ ದಡಕ್ಕೆ ಬಂದು ಉಸುಕಿನಲ್ಲಿ ಹೊರಳಾಡಿ ತನ್ನ ಮೈ ಮೇಲೆ ಉಸುಕಿನ ಕಣಗಳು ಅಂಟುವಂತೆ ಮಾಡುತ್ತಿತ್ತು. ನಂತರ ಸೇತುವೆಯ ನಿರ್ಮಾಣ ಕಾರ್ಯ ನಡೆಯುತ್ತಿದ್ದ ಸ್ಥಳಕ್ಕೆ ಬಂದು ತನ್ನ ಮೈಯನ್ನು ಒದರಿ ತನ್ನ ದೇಹಕ್ಕೆ ಅಂಟಿದ ಎಲ್ಲ ಉಸುಕನ್ನು ತೊಡೆದು ಹಾಕುತ್ತಿತ್ತು. ಇದೇ ರೀತಿ ನಿರಂತರವಾಗಿ ತನ್ನ ಸೇವೆ ಮುಂದುವರೆಸಿತು ಪುಟ್ಟ ಅಳಿಲ ಮರಿ. ಪದೇ ಪದೇ ಅಳಿಲು ಮಾಡುವ ಕೆಲಸವನ್ನು ಗಮನಿಸಿದ ಪ್ರಭು ಶ್ರೀರಾಮಚಂದ್ರನು ತನ್ನ ಸಹಚರರೊಂದಿಗೆ ಈ ವಿಷಯದ ಕುರಿತು ಪ್ರಸ್ತಾಪಿಸಿದಾಗ ಅಳಿಲಿನ ಸೇವೆಯ ಕುರಿತು ಅವರು ವಿವರಣೆ ನೀಡಿದರು. ಪುಟ್ಟದಾದರೂ ಸೇವೆ ಮಾಡಬೇಕೆಂಬ ಅಳಿಲಿನ ಮಹತ್ವಾಕಾಂಕ್ಷೆಯನ್ನು ಅರಿತ ಪ್ರಭು ಶ್ರೀ ರಾಮಚಂದ್ರನು ಅತ್ಯಂತ ಮಮತೆಯಿಂದ ಅಳಿಲಿನ ದೇಹದ ಮೇಲೆ ಸವರಿದನು.ರಾಮನ ಮೂರು ಕೈ ಬೆರಳುಗಳ ಗುರುತು ಸೇವೆಯ ದ್ಯೋತಕವಾಗಿ ಕಾರ್ಯ ನಿರ್ವಹಿಸಿದ ಅಳಿಲಿನ ಮೈ ಮೇಲೆ ಇಂದಿಗೂ ಕೂಡ ಕಾಣಬಹುದು.ಅಂದಿನಿಂದ ಯಾವುದೇ ಕೆಲಸ ಕಾರ್ಯಗಳಲ್ಲಿ ಕಿಂಚಿತ್ತು ಸಹಾಯ ಮಾಡುವುದನ್ನು ಅಳಿಲು ಸೇವೆ ಎಂದು ಅಳಿಲಿನ ಸೇವೆಯ ಸ್ಮರಣಾರ್ಥವಾಗಿ ಹೇಳಲು ಆರಂಭಿಸಿದರು.

ಇಷ್ಟೇ ಆದರೆ ರಾಮ ಓರ್ವ ರಾಜನೆಂದು ಪ್ರಸಿದ್ಧನಾಗುತ್ತಿದ್ದ ಮಾತ್ರ ಆದರೆ ರಾಮ ಆದರ್ಶ ವ್ಯಕ್ತಿ ಎನಿಸಿದ, ದೈವ ರೂಪವೆನಿಸಿದ ಮುಂದೆ ದೇವರೇ ಆದ. ರಾಮನು ಅಖಂಡ ಭೋಗ ಭಾಗ್ಯದಲ್ಲಿ ಇರುವ ವಯಸ್ಸಿನಲ್ಲಿ ಗುರುಹಿರಿಯರಿಗೆ ವಿಧೇಯನಾಗಿ ಗುರುಕುಲದ ನಿಯಮಗಳಿಗೆ ಬದ್ಧನಾಗಿ ತನ್ನ ಸೋದರರೊಂದಿಗೆ ಗುರುಕುಲದಲ್ಲಿ ಇದ್ದು ವಿದ್ಯೆ ಕಲಿತನು. ನವ ವಿವಾಹಿತನಾಗಿ ಅಯೋಧ್ಯೆಗೆ ಮರಳಿದ ರಾಮನು ತನ್ನ ಚಿಕ್ಕಮ್ಮನಿಗೆ ತಂದೆ ನೀಡಿದ ವಚನಕ್ಕೆ ಬದ್ಧನಾಗಿ ಅರಮನೆಯ ಭೋಗ ಭಾಗ್ಯಗಳನ್ನು ತ್ಯಜಿಸಿ ನಾರು ಮಡಿಯನ್ನುಟ್ಟು ಕಾಡಿಗೆ ತೆರಳಿ ಪರ್ಣಕುಟಿಯಲ್ಲಿ ವಾಸವಿದ್ದು ಗೆಡ್ಡೆ ಗೆಣಸುಗಳನ್ನು ತಿಂದು ಜೀವನ ನಡೆಸಿದನು. ತನ್ನ ವನವಾಸಕ್ಕೆ ಕಾರಣಳಾದ ತಾಯಿ ಕೈಕೆಯಿಯನ್ನು ದ್ವೇಷಿಸದೆ, ಆಕೆಯ ಪುತ್ರ ಭರತನು ರಾಜ್ಯಕ್ಕೆ ಮರಳುವಂತೆ ಮಾಡಿದ ಆಗ್ರಹಕ್ಕೂ ಬಗ್ಗದೆ ಕಾಡಿನಲ್ಲಿಯೇ ಉಳಿದುಕೊಂಡನು. ಧರ್ಮ ಕಾರ್ಯಗಳಿಗೆ ಯಾಗಾದಿಗಳಿಗೆ ಅಡ್ಡಿ ಮಾಡಿದ ರಾಕ್ಷಸರನ್ನು ಸದೆಬಡಿದನು. ತಾನು ವಿಷ್ಣುವಿನ ದಶಾವತಾರಗಳಲ್ಲಿ ಒಂದೆಂಬ ಅರಿವನ್ನು ಹೊಂದಿದ್ದರು ಕೂಡ ಎಂದು ತನ್ನ ದೈವತ್ವವನ್ನು ಮಾನವನಾದ ರಾಮನ ಮೇಲೆ ಹೇರಲಿಲ್ಲ. ಸದಾ ಧರ್ಮ ರಕ್ಷಕನಾಗಿ ಧರ್ಮ ಪಾಲಕನಾಗಿದ್ದನು. ಪತ್ನಿಯನ್ನು ಕಳೆದುಕೊಂಡಿದ್ದರೂ ಕೇವಲ ವಾನರ ಸೈನ್ಯದ ಸಹಾಯದಿಂದ ಯುದ್ಧ ಮಾಡಿ ಗೆದ್ದನು. ರಾಕ್ಷಸೇಂದ್ರನಾದ ರಾವಣನು ತನ್ನ ಕಡುವೈರಿಯಾಗಿದ್ದರು ಆತನ ಶಿವ ಭಕ್ತಿಗೆ ಮಾರುಹೋಗಿದ್ದ ರಾಮನು ಆತನ ಅಂತಿಮ ಸಂಸ್ಕಾರದಲ್ಲಿ ಭಾಗಿಯಾಗಿದ್ದನು. ಇಂದ್ರನ ಅಮರಾವತಿಯನ್ನು ನಾಚಿಸುವಂತಹ ಸ್ವರ್ಣ ಲಂಕೆಯನ್ನು ಗೆದ್ದರೂ ರಾವಣನ ಸಹೋದರ ವಿಭೀಷಣನಿಗೆ ಲಂಕೆಯ ರಾಜನಾಗಿ ಪಟ್ಟಾಭಿಷೇಕ ಮಾಡಿದನು. ಪುರ ಜನರ ಮಾತುಗಳಿಗೆ ಪತ್ನಿ ಸೀತಾದೇವಿ ಬಲಿಯಾಗಬಾರದೆಂದು ಆಕೆಯ ಅಗ್ನಿ ಪ್ರವೇಶಕ್ಕೆ ಮೌನ ಸಮ್ಮತಿಯನ್ನು ನೀಡಿದನು. *ಮರಳಿ ಅಯೋಧ್ಯೆಗೆ ಬಂದ ನಂತರ ತನ್ನ ತಾಯಿ ಕೌಸಲ್ಯಗೆ ನೀಡಿದಷ್ಟೇ ಗೌರವವನ್ನು ಉಳಿದಿಬ್ಬರು ತಾಯಂದಿರಾದ ಸುಮಿತ್ರ ಮತ್ತು ಕೈಕೆಯರಿಗೆ ನೀಡಿದನಲ್ಲದೆ, ಕೈಕೆಯಿಯು ತನ್ನ ಆಕೃತ್ಯಕ್ಕಾಗಿ ಸದಾ ಮರುಗದಿರುವಂತೆ ಕೇಳಿಕೊಂಡನು.

ಇತಿಹಾಸದ ಪ್ರಕಾರ ಸುಮಾರು 1000 ವರ್ಷ ರಾಮನು ರಾಜ್ಯವಾಳಿದನು ಎಂದು ಹೇಳುತ್ತಾರೆ. ಈ ಸಮಯ ಭಾರತ ದೇಶದ ಉತ್ತರ ಭಾಗದ ಅಯೋಧ್ಯೆ ರಾಮ ರಾಜ್ಯವಾಗಿತ್ತು. ಸುಖ ಶಾಂತಿ ನೆಮ್ಮದಿ ಸಮೃದ್ಧಿ ಎಲ್ಲವೂ ನೆಲೆಸಿತ್ತು. ಭವ ಬಂಧನದಲ್ಲಿ ಇದ್ದುಕೊಂಡೆ ಶ್ರೀರಾಮನು ಸದ್ಗುಣಗಳ ಆಗರವಾಗಿ, ಪಿತೃವಾಕ್ಯ ಪರಿಪಾಲಕನಾಗಿ, ಒಳ್ಳೆಯ ಸಹೋದರನಾಗಿ ಮರ್ಯಾದಾ ಪುರುಷನಾಗಿ, ಏಕ ಪತ್ನಿ ವ್ರತಸ್ಥನಾಗಿ, ದಕ್ಷ ರಾಜನಾಗಿ ಬಾಳಿ ಬದುಕಿದ. ಅಂತೆಯೇ ಇತಿಹಾಸದಲ್ಲಿ ಆತ ಅಜರಾಮರನಾದ, ಮಾನವತೆಯಿಂದ ದೇವತ್ವದೆಡೆಗೆ ನಡೆದ.... ಕೊನೆಗೆ ಪ್ರಭು ಶ್ರೀರಾಮ ದೇವರೇ ಆದನು. ಅಂತೆಯೇ ಪ್ರಭು ಶ್ರೀ ರಾಮನು ಹುಟ್ಟಿದ ಚೈತ್ರ ಮಾಸದ ನವಮಿ ತಿಥಿಯನ್ನು ರಾಮನವಮಿ ಎಂದು ದೇಶದೆಲ್ಲೆಡೆ ಸಂತಸ ಸಡಗರದಿಂದ ಆಚರಿಸುತ್ತಾರೆ. ಎಲ್ಲರೂ ಪ್ರಭು ಶ್ರೀರಾಮನ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು



ವೀಣಾ ಹೇಮಂತ್ ಗೌಡ ಪಾಟೀಲ್

# ಹಾಲು ಮರ ಪ್ರಕೃತಿಯ ಮಡಿಲಿನ ಅಪರೂಪದ ಹಸಿರು ಅದ್ಭುತ

ಮರವೆಂದರೆ ಕೇವಲ ನೆರಳು ನೀಡುವ ಜೀವಿಯಲ್ಲ; ಅದು ಮಣ್ಣು, ನೀರು, ಗಾಳಿ, ಪಕ್ಷಿಗಳು, ಕೀಟಗಳು ಮತ್ತು ಮನುಷ್ಯನ ಬದುಕಿನೊಂದಿಗೆ ಬೆಸೆದುಕೊಂಡಿರುವ ಪ್ರಕೃತಿಯ ಮಹತ್ವದ ಅಂಗ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಸಾಮಾನ್ಯವಾಗಿ ಕಾಣುವ ಕೆಲವು ಮರಗಳು ತಮ್ಮದೇ ಆದ ವಿಶಿಷ್ಟ ಲಕ್ಷಣಗಳಿಂದ ಜನರ ಗಮನ ಸೆಳೆಯುತ್ತವೆ. ಅಂತಹ ವಿಶಿಷ್ಟ ಮರಗಳ ಪೈಕಿ ಹಾಲು ಮರವೂ ಒಂದು.

ಹಾಲು ಮರದ ಕಾಂಡ ಅಥವಾ ಕೊಂಬೆಗೆ ಸಣ್ಣ ಗಾಯವಾದಾಗ ಹೊರಬರುವ ಬಿಳಿ ಬಣ್ಣದ ಹಾಲಿನಂತಹ ದ್ರವವೇ ಈ ಮರದ ಪ್ರಮುಖ ಆಕರ್ಷಣೆ. ಸಾಮಾನ್ಯವಾಗಿ ಹಾಲಿನಂತೆ ಕಾಣುವ ಈ ದ್ರವವನ್ನು ಸಸ್ಯಶಾಸ್ತ್ರದಲ್ಲಿ ಲ್ಯಾಟೆಕ್ಸ್ ಎಂದು ಕರೆಯಲಾಗುತ್ತದೆ. ಇದು ನಿಜವಾದ ಹಾಲಲ್ಲ. ಅನೇಕ ಲ್ಯಾಟೆಕ್ಸ್ ಹೊಂದಿರುವ ಸಸ್ಯಗಳಲ್ಲಿ ಈ ದ್ರವವು ಸಸ್ಯದ ಸ್ವಾಭಾವಿಕ ರಕ್ಷಣಾ ವ್ಯವಸ್ಥೆಯ ಭಾಗವಾಗಿರುತ್ತದೆ.

**ಮರದ ಹೆಸರಿನ ಹಿಂದಿರುವ ವಿಶೇಷತೆ**

ಹಾಲಿನಂತೆ ಬಿಳಿಯಾಗಿ ಕಾಣುವ ಸ್ರಾವದಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕೆಲವು ಸಸ್ಯಗಳಿಗೆ ಸ್ಥಳೀಯವಾಗಿ 'ಹಾಲು ಮರ' ಎಂಬ ಹೆಸರು ಬಳಕೆಯಲ್ಲಿದೆ. ಆದರೆ ಒಂದು ಮುಖ್ಯ ವಿಚಾರವನ್ನು ಗಮನಿಸಬೇಕು?'ಹಾಲು ಮರ' ಎಂಬ ಹೆಸರು ಎಲ್ಲ ಪ್ರದೇಶಗಳಲ್ಲೂ ಒಂದೇ ಸಸ್ಯ ಪ್ರಭೇದವನ್ನು ಸೂಚಿಸುವುದಿಲ್ಲ. ಸ್ಥಳೀಯ ಹೆಸರುಗಳು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗಬಹುದು. ಆದ್ದರಿಂದ ಹಾಲು ಮರದ ಔಷಧೀಯ ಗುಣ, ಉಪಯೋಗ ಅಥವಾ ವಿಷಕಾರಿ ಗುಣಗಳ ಬಗ್ಗೆ ಮಾತನಾಡುವಾಗ ಮರದ ನಿಖರ ಸಸ್ಯಶಾಸ್ತ್ರೀಯ ಗುರುತಿಸುವಿಕೆ ಅತ್ಯಂತ ಮುಖ್ಯವಾಗುತ್ತದೆ.

**ಹಾಲಿನಂತಿರುವ ದ್ರವ ಎಂದರೇನು**

ಮರದ ಕೊಂಬೆ ಅಥವಾ ಕಾಂಡಕ್ಕೆ ಗಾಯವಾದಾಗ ಹೊರಬರುವ ಬಿಳಿ ದ್ರವವನ್ನು ನೋಡಿದಾಗ ಅದು ಹಾಲಿನಂತೆ ಕಾಣುತ್ತದೆ. ಆದರೆ ಅದು ಪ್ರಾಣಿಗಳಿಂದ ದೊರೆಯುವ ಹಾಲಿನಂತಲ್ಲ. ಲ್ಯಾಟೆಕ್ಸ್‌ನಲ್ಲಿ ನೀರು, ರಬ್ಬರ್‌ನಂತಹ ನೈಸರ್ಗಿಕ ಪಾಲಿಮರ್‌ಗಳು, ರಾಳಗಳು, ಕೊಬ್ಬಿನ ಅಂಶಗಳು, ಪ್ರೋಟೀನ್‌ಗಳು ಮತ್ತು ಸಸ್ಯಕ್ಕೆ ಸಂಬಂಧಿಸಿದ ವಿವಿಧ ನೈಸರ್ಗಿಕ ರಾಸಾಯನಿಕ ಸಂಯುಕ್ತಗಳು ಇರಬಹುದು. ಯಾವ ಸಸ್ಯದಲ್ಲಿ ಯಾವ ಸಂಯುಕ್ತಗಳಿವೆ ಎಂಬುದು ಅದರ ಪ್ರಭೇದವನ್ನು ಅವಲಂಬಿಸಿರುತ್ತದೆ. ಕೆಲವು ಸಸ್ಯಗಳಲ್ಲಿ ಈ ಲ್ಯಾಟೆಕ್ಸ್ ಗಾಯದ ಭಾಗವನ್ನು ಮುಚ್ಚುವಲ್ಲಿ ಸಹಾಯ ಮಾಡುತ್ತದೆ. ಜೊತೆಗೆ ಸಸ್ಯವನ್ನು ಕೆಲವು ಕೀಟಗಳು ಮತ್ತು ಸಸ್ಯಾಹಾರಿ ಜೀವಿಗಳಿಂದ ರಕ್ಷಿಸುವಲ್ಲಿಯೂ ಪಾತ್ರ ವಹಿಸಬಹುದು.

**ಸಸ್ಯದ ಸ್ವಾಭಾವಿಕ ರಕ್ಷಣಾ ಕವಚ**

ಮನುಷ್ಯನಿಗೆ ಗಾಯವಾದಾಗ ರಕ್ತ ಹೆಪ್ಪುಗಟ್ಟುವ ಮೂಲಕ ಗಾಯ ಮುಚ್ಚಿಕೊಳ್ಳುವ ಪ್ರಕ್ರಿಯೆ ನಡೆಯುತ್ತದೆ. ಅದೇ ರೀತಿಯಲ್ಲಿ ಸಸ್ಯಗಳಲ್ಲಿಯೂ ಗಾಯಗೊಂಡ ಭಾಗವನ್ನು ರಕ್ಷಿಸುವ ಹಲವು ಸ್ವಾಭಾವಿಕ ವ್ಯವಸ್ಥೆಗಳಿವೆ. ಲ್ಯಾಟೆಕ್ಸ್ ಹೊಂದಿರುವ ಕೆಲವು ಸಸ್ಯಗಳಲ್ಲಿ ಕೊಂಬೆ ಅಥವಾ ಕಾಂಡಕ್ಕೆ ಗಾಯವಾದಾಗ ಈ ಬಿಳಿ ದ್ರವ ಹೊರಬರುತ್ತದೆ. ಹೊರಗಿನ ಗಾಳಿಗೆ ತಾಗಿದ ನಂತರ ಅದು ಗಟ್ಟಿಯಾಗಬಹುದು ಅಥವಾ ಅಂಟಿಕೊಳ್ಳುವ ಸ್ವರೂಪ ಪಡೆಯಬಹುದು. ಹೀಗೆ ಗಾಯಗೊಂಡ ಭಾಗವನ್ನು ಕೆಲವು ಮಟ್ಟಿಗೆ



ಮುಚ್ಚುವಲ್ಲಿ ಅದು ಸಹಕಾರಿಯಾಗಬಹುದು. ಇದು ಪ್ರಕೃತಿಯಲ್ಲಿರುವ ಅದ್ಭುತ ಹೊಂದಾಣಿಕೆಯ ಒಂದು ಉದಾಹರಣೆಯಾಗಿದೆ.

**ಎಲೆ, ಕಾಂಡ ಮತ್ತು ಬೇರುಗಳ ಮಹತ್ವ**

ಹಾಲು ಮರದಂತಹ ಸಸ್ಯಗಳಲ್ಲಿಯೂ ಎಲೆಗಳು ಪ್ರಕಾಶಸಂಶ್ಲೇಷಣೆಯ ಮೂಲಕ ಸಸ್ಯದ ಆಹಾರ ತಯಾರಿಸುವ ಪ್ರಮುಖ ಅಂಗಗಳಾಗಿವೆ. ಬೇರುಗಳು ಮಣ್ಣಿನಿಂದ ನೀರು ಮತ್ತು ಖನಿಜಾಂಶಗಳನ್ನು ಹೀರಿಕೊಳ್ಳುತ್ತವೆ. ಕಾಂಡವು ಬೇರುಗಳಿಂದ ಮೇಲ್ಭಾಗಕ್ಕೆ ನೀರು ಹಾಗೂ ಖನಿಜಾಂಶಗಳನ್ನು ಸಾಗಿಸುವುದರ ಜೊತೆಗೆ ಸಸ್ಯವನ್ನು ನಿಂತುಕೊಳ್ಳುವಂತೆ ಮಾಡುತ್ತದೆ. ಮರದ ಪ್ರತಿಯೊಂದು ಭಾಗವೂ ತನ್ನದೇ ಆದ ಕೆಲಸವನ್ನು ನಿರ್ವಹಿಸುತ್ತದೆ. ಹೀಗಾಗಿ ಒಂದು ಮರವನ್ನು ಕೇವಲ ಅದರ ಹಾಲಿನಂತಹ ಸ್ರಾವದ ಆಧಾರದ ಮೇಲೆ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅದರ ಸಂಪೂರ್ಣ ಪರಿಸರ ಮತ್ತು ಸಸ್ಯಶಾಸ್ತ್ರೀಯ ಗುಣಲಕ್ಷಣಗಳನ್ನು ಗಮನಿಸಬೇಕು.

**ಗ್ರಾಮೀಣ ಬದುಕಿನೊಂದಿಗೆ ಬೆಸೆದುಕೊಂಡಿರುವ ಮರ**

ಭಾರತದ ಗ್ರಾಮೀಣ ಜೀವನದಲ್ಲಿ ಮರಗಳಿಗೆ ವಿಶೇಷ ಸ್ಥಾನವಿದೆ. ಹಿಂದೆ ಗ್ರಾಮಗಳಲ್ಲಿ ಹಿರಿಯರು ಸ್ಥಳೀಯ ಮರಗಳ ಹೆಸರು, ಎಲೆಗಳ ಆಕಾರ, ಹೂವು, ಹಣ್ಣು, ತೊಗಟೆ ಮತ್ತು ಸ್ರಾವದ ಆಧಾರದ ಮೇಲೆ ಸಸ್ಯಗಳನ್ನು ಗುರುತಿಸುತ್ತಿದ್ದರು. ಜನಪದ ಜ್ಞಾನದಲ್ಲಿ ಹಲವು ಸಸ್ಯಗಳಿಗೆ ವಿವಿಧ ಉಪಯೋಗಗಳನ್ನೂ ಹೇಳಲಾಗುತ್ತದೆ. ಆದರೆ ತಲೆಮಾರುಗಳಿಂದ ಬಂದಿರುವ ಪ್ರತಿಯೊಂದು ಮಾಹಿತಿಯೂ ವೈಜ್ಞಾನಿಕವಾಗಿ ಸಾಬೀತಾಗಿದೆ ಎಂದು ಹೇಳಲು ಸಾಧ್ಯವಿಲ್ಲ.

ಹೀಗಾಗಿ ಪಾರಂಪರಿಕ ಜ್ಞಾನವನ್ನು ಗೌರವಿಸುವುದರ ಜೊತೆಗೆ, ವೈಜ್ಞಾನಿಕ ಪರಿಶೀಲನೆಗೂ ಮಹತ್ವ ನೀಡುವುದು ಅಗತ್ಯ.

**ಔಷಧೀಯ ಬಳಕೆ ತಿಳಿದುಕೊಂಡು ಬಳಸುವುದು ಮುಖ್ಯ**

ಕೆಲವು ಲ್ಯಾಟೆಕ್ಸ್ ಹೊಂದಿರುವ ಸಸ್ಯಗಳಿಗೆ ಆಯುರ್ವೇದ ಮತ್ತು ಇತರ ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಗಳಲ್ಲಿ ವಿವಿಧ ಬಳಕೆಗಳ ಉಲ್ಲೇಖಗಳಿವೆ. ಆದರೆ ಪ್ರತಿಯೊಂದು ಬಿಳಿ ಸ್ರಾವವನ್ನೂ ಔಷಧಿ ಎಂದು ಪರಿಗಣಿಸುವುದು ತಪ್ಪು. ಕೆಲವು ಸಸ್ಯಗಳ ಲ್ಯಾಟೆಕ್ಸ್ ಚರ್ಮಕ್ಕೆ ತುರಿಕೆ, ಉರಿ ಅಥವಾ ಅಲರ್ಜಿಯಂತಹ ಸಮಸ್ಯೆಗಳನ್ನು ಉಂಟುಮಾಡಬಹುದು. ಕೆಲವು ಸಸ್ಯಗಳ ಸ್ರಾವ ಕಣ್ಣುಗಳಿಗೆ ತಾಗಿದರೆ ಗಂಭೀರ ಕಿರಿಕಿರಿ ಉಂಟಾಗುವ ಸಾಧ್ಯತೆಯೂ ಇದೆ. ಆದ್ದರಿಂದ ಮರದ ನಿಖರ ಪ್ರಭೇದ ತಿಳಿಯದೆ ಅದರ ಸ್ರಾವವನ್ನು ಕುಡಿಯುವುದು, ಸೇವಿಸುವುದು, ಗಾಯಕ್ಕೆ ಹಚ್ಚುವುದು ಅಥವಾ ಔಷಧಿಯಾಗಿ ಬಳಸುವುದು ಸೂಕ್ತವಲ್ಲ. ಯಾವುದೇ ಸಸ್ಯವನ್ನು ಚಿಕಿತ್ಸಾ ಉದ್ದೇಶಕ್ಕಾಗಿ ಬಳಸುವ ಮೊದಲು ಅರ್ಹ ವೈದ್ಯರು ಅಥವಾ ಸಸ್ಯಶಾಸ್ತ್ರ ತಜ್ಞರ ಸಲಹೆ ಪಡೆಯುವುದು ಸುರಕ್ಷಿತ ಮಾರ್ಗವಾಗಿದೆ.

**ಜೀವವೈವಿಧ್ಯಕ್ಕೆ ಮರಗಳ ಕೊಡುಗೆ**

ಒಂದು ಮರ ತನ್ನ ಜೀವನವನ್ನು ಮಾತ್ರ ನಡೆಸುವುದಿಲ್ಲ. ಅದರ ಸುತ್ತಲೂ ಒಂದು ಸಣ್ಣ ಪರಿಸರ ವ್ಯವಸ್ಥೆಯೇ ರೂಪುಗೊಳ್ಳುತ್ತದೆ. ಪಕ್ಷಿಗಳು ಮರದ ಕೊಂಬೆಗಳಲ್ಲಿ ಗೂಡು ಕಟ್ಟಬಹುದು. ಕೀಟಗಳು ಅದರ ಎಲೆ, ಹೂವು ಅಥವಾ ಸುತ್ತಮುತ್ತಲಿನ ಪರಿಸರವನ್ನು ಆಶ್ರಯಿಸಬಹುದು. ಸಣ್ಣ ಜೀವಿಗಳಿಗೆ ಮರದ ನೆರಳು ಮತ್ತು ಎಲೆಗಳ ಪದರವು ವಾಸಸ್ಥಳವಾಗಬಹುದು. ಹೀಗಾಗಿ ಒಂದು ಮರವನ್ನು ಉಳಿಸುವುದು ಎಂದರೆ ಕೇವಲ ಒಂದು ಸಸ್ಯವನ್ನು ಉಳಿಸುವುದಲ್ಲ; ಅದರೊಂದಿಗೆ ಸಂಬಂಧ ಹೊಂದಿರುವ ಅನೇಕ ಜೀವಿಗಳ ಬದುಕಿಗೂ ಸಹಾಯ ಮಾಡುವುದು.

**ಮಣ್ಣಿನ ಸಂರಕ್ಷಣೆಯಲ್ಲಿ ಮರಗಳ ಪಾತ್ರ**

ಮರಗಳ ಬೇರುಗಳು ಮಣ್ಣನ್ನು ಹಿಡಿದಿಡಲು ಸಹಾಯ ಮಾಡುತ್ತವೆ. ಮಳೆ ನೀರು ನೇರವಾಗಿ ಮಣ್ಣನ್ನು ಕೊಚ್ಚಿಕೊಂಡು ಹೋಗುವುದನ್ನು ಕಡಿಮೆ ಮಾಡಲು ಮರಗಳು ನೆರವಾಗುತ್ತವೆ. ಬಿದ್ದ ಎಲೆಗಳು ಕೊಳೆಯುವ ಮೂಲಕ ಮಣ್ಣಿಗೆ ಸಾವಯವ ಪದಾರ್ಥಗಳನ್ನು ಸೇರಿಸುತ್ತವೆ. ಇದರಿಂದ ಮಣ್ಣಿನ ಗುಣಮಟ್ಟ ಮತ್ತು ಪರಿಸರದ ಸಮತೋಲನ ಕಾಪಾಡಲು ಮರಗಳು ನೆರವಾಗುತ್ತವೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಮರಗಳನ್ನು ಉಳಿಸುವುದು ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಬಹಳ ಮುಖ್ಯ.

**ಬಿಸಿಲಿನ ನಡುವೆ ಮರಗಳ ನೆರಳು**

ಇತ್ತೀಚಿನ ವರ್ಷಗಳಲ್ಲಿ ತಾಪಮಾನ ಹೆಚ್ಚಳ ಮತ್ತು ನಗರೀಕರಣದ ಪರಿಣಾಮವಾಗಿ ಮರಗಳ ಮಹತ್ವ ಇನ್ನಷ್ಟು ಹೆಚ್ಚಾಗಿದೆ. ಕಾಂಕ್ರೀಟ್ ಕಟ್ಟಡಗಳು ಹೆಚ್ಚಾಗುತ್ತಿರುವ ಪ್ರದೇಶಗಳಲ್ಲಿ ಹಸಿರು ಪ್ರದೇಶ ಕಡಿಮೆಯಾಗುತ್ತಿದೆ. ಮರಗಳು ನೆರಳು ನೀಡುವುದರ ಜೊತೆಗೆ ಸುತ್ತಮುತ್ತಲಿನ ವಾತಾವರಣವನ್ನು ತಂಪಾಗಿಡಲು ಸಹಾಯ ಮಾಡುತ್ತವೆ. ಮರಗಳಿರುವ ಪ್ರದೇಶಗಳು ಮಾನವ ವಾಸಕ್ಕೆ ಹೆಚ್ಚು ಅನುಕೂಲಕರವಾಗುತ್ತವೆ. ಹೀಗಾಗಿ ಹಾಲು ಮರವಾಗಲಿ, ಆಲದ ಮರವಾಗಲಿ, ಬೇವು ಮರವಾಗಲಿ ಅಥವಾ ಯಾವುದೇ ಸ್ಥಳೀಯ ಮರವಾಗಲಿ?ಪ್ರತಿಯೊಂದು ಮರಕ್ಕೂ ಪರಿಸರದಲ್ಲಿ ತನ್ನದೇ ಆದ ಸ್ಥಾನವಿದೆ.

**ರೈತರು ಮತ್ತು ಸಸ್ಯ ಸಂರಕ್ಷಣೆ**

ಕೃಷಿ ಪ್ರದೇಶಗಳಲ್ಲಿ ಮರಗಳ ಸಂರಕ್ಷಣೆಯು ಪರಿಸರದ ಜೊತೆಗೆ ಕೃಷಿ ವ್ಯವಸ್ಥೆಯ ಆರೋಗ್ಯಕ್ಕೂ ಸಂಬಂಧಿಸಿದೆ. ಹೊಲಗಳ ಅಂಚಿನಲ್ಲಿ ಇರುವ ಮರಗಳು ಪಕ್ಷಿಗಳು ಮತ್ತು ಇತರ ಜೀವಿಗಳಿಗೆ ಆಶ್ರಯ ನೀಡಬಹುದು. ಆದರೆ ಯಾವುದೇ ಮರವನ್ನು ಕೃಷಿ ಪ್ರದೇಶದಲ್ಲಿ ಬೆಳೆಸುವ ಮೊದಲು ಅದರ ಬೇರುಗಳ ಸ್ವಭಾವ, ನೀರಿನ ಅವಶ್ಯಕತೆ, ಕೃಷಿ ಬೆಳೆಗಳ ಮೇಲೆ ಪರಿಣಾಮ ಮತ್ತು ಸ್ಥಳೀಯ ಪರಿಸರಕ್ಕೆ ಹೊಂದಾಣಿಕೆ ಇತ್ಯಾದಿಗಳನ್ನು ಗಮನಿಸಬೇಕು. ಮಕ್ಕಳಿಗೆ ಸಸ್ಯಗಳ ಪರಿಚಯ ಅಗತ್ಯ ಇಂದಿನ ಮಕ್ಕಳಿಗೆ ಮೊಬೈಲ್, ಕಂಪ್ಯೂಟರ್ ಮತ್ತು ಡಿಜಿಟಲ್ ಜಗತ್ತಿನ ಪರಿಚಯ ಹೆಚ್ಚಾಗಿದೆ. ಆದರೆ ತಮ್ಮ ಸುತ್ತಲಿನ ಮರ–ಗಿಡಗಳ ಪರಿಚಯ ಕಡಿಮೆಯಾಗುತ್ತಿರುವುದು ಗಮನಾರ್ಹ. ಶಾಲೆಗಳಲ್ಲಿ ಸ್ಥಳೀಯ ಮರಗಳ ಪರಿಚಯ, ಸಸ್ಯಗಳ ಹೆಸರುಗಳನ್ನು ಕಲಿಸುವುದು, ಮರಗಳ ಎಲೆ–ಹೂವು–ಹಣ್ಣುಗಳನ್ನು ಗುರುತಿಸುವ ಚಟುವಟಿಕೆಗಳನ್ನು ನಡೆಸುವುದು ಪರಿಸರ ಜಾಗೃತಿಗೆ ಸಹಕಾರಿ. ಒಂದು ಮಗು ಒಂದು ಮರವನ್ನು ಗುರುತಿಸಿ ಅದರ ಬಗ್ಗೆ ತಿಳಿದುಕೊಂಡಾಗ, ಪ್ರಕೃತಿಯೊಂದಿಗೆ ಅದರ ಸಂಬಂಧವೂ ಗಟ್ಟಿಯಾಗುತ್ತದೆ.

**ಮರ ನೆಡುವುದಕ್ಕಿಂತ ಮರ ಉಳಿಸುವುದು ಮುಖ್ಯ**

ಪ್ರತಿ ವರ್ಷ ಸಾವಿರಾರು ಮರಗಳನ್ನು ನೆಡುವ ಕಾರ್ಯಕ್ರಮಗಳು ನಡೆಯುತ್ತವೆ. ಆದರೆ ನೆಟ್ಟ ಗಿಡಗಳು ಬದುಕಿ ದೊಡ್ಡ ಮರಗಳಾಗುತ್ತಿವೆಯೇ ಎಂಬುದೂ ಅಷ್ಟೇ ಮುಖ್ಯ. ಗಿಡ ನೆಡುವುದು ಮೊದಲ ಹೆಜ್ಜೆ ಮಾತ್ರ. ಅದಕ್ಕೆ ನೀರು ಹಾಕುವುದು, ರಕ್ಷಣೆ ನೀಡುವುದು, ಪ್ರಾಣಿಗಳಿಂದ ಕಾಪಾಡುವುದು ಮತ್ತು ಕೆಲವು ವರ್ಷಗಳವರೆಗೆ ಆರೈಕೆ ಮಾಡುವುದು ನಿಜವಾದ ಪರಿಸರ ಸೇವೆ. ಒಂದು ಗಿಡವನ್ನು ನೆಟ್ಟು ಮರೆತುಬಿಡುವುದಕ್ಕಿಂತ, ಒಂದು ಗಿಡವನ್ನು ನೆಟ್ಟು ಅದು ಮರವಾಗುವವರೆಗೆ ಕಾಪಾಡುವುದು ಹೆಚ್ಚು ಮಹತ್ವದ ಕೆಲಸ.

**ಪ್ರಕೃತಿಯ ಪಾಠ ಕಲಿಸುವ ಹಾಲು ಮರ**

ಹಾಲು ಮರದ ಬಿಳಿ ಸ್ರಾವವು ಪ್ರಕೃತಿಯಲ್ಲಿರುವ ಸಣ್ಣದೊಂದು ಅದ್ಭುತವನ್ನು ನಮಗೆ ತೋರಿಸುತ್ತದೆ. ಮರದ ಒಂದು ಭಾಗಕ್ಕೆ ಗಾಯವಾದಾಗ ಅದರೊಳಗಿಂದ ಹೊರಬರುವ ದ್ರವವು ಸಸ್ಯದ ರಕ್ಷಣಾ ವ್ಯವಸ್ಥೆಯ ಬಗ್ಗೆ ಕುತೂಹಲ ಮೂಡಿಸುತ್ತದೆ. ಇಂತಹ ಮರಗಳನ್ನು ಗಮನಿಸುವುದರಿಂದ ಪ್ರಕೃತಿ ಎಷ್ಟು ಸಂಕೀರ್ಣ ಮತ್ತು ವೈವಿಧ್ಯಮಯವಾಗಿದೆ ಎಂಬುದು ಅರಿವಾಗುತ್ತದೆ. ನಾವು ಸಾಮಾನ್ಯವಾಗಿ 'ಮರ' ಎಂದು ಒಂದೇ ಪದದಲ್ಲಿ ಕರೆಯುವ ಸಸ್ಯಗಳಲ್ಲಿಯೇ ಎಷ್ಟೊಂದು ವಿಭಿನ್ನ ಗುಣಗಳಿವೆ ಎಂಬುದನ್ನು ಇದು ತಿಳಿಸುತ್ತದೆ.

**ಕೊನೆಯ ಮಾತು**

ಹಾಲು ಮರವು ತನ್ನ ವಿಶಿಷ್ಟ ಬಿಳಿ ಸ್ರಾವದಿಂದ ಜನರ ಗಮನ ಸೆಳೆಯುವ ಪ್ರಕೃತಿಯ ಒಂದು ಕುತೂಹಲಕಾರಿ ಸಸ್ಯ. ಅದರ ಬಗ್ಗೆ ತಿಳಿದುಕೊಳ್ಳುವಾಗ ಸ್ಥಳೀಯ ಹೆಸರು ಮತ್ತು ನಿಖರ ಸಸ್ಯ ಪ್ರಭೇದದ ನಡುವಿನ ವ್ಯತ್ಯಾಸವನ್ನು ಅರಿತುಕೊಳ್ಳುವುದು ಅತ್ಯಂತ ಮುಖ್ಯ. ಪ್ರಕೃತಿಯ ಪ್ರತಿಯೊಂದು ಮರಕ್ಕೂ ತನ್ನದೇ ಆದ ಪಾತ್ರವಿದೆ. ಅವು ಗಾಳಿ ಶುದ್ಧೀಕರಣ, ನೆರಳು, ಮಣ್ಣಿನ ಸಂರಕ್ಷಣೆ, ಜೀವವೈವಿಧ್ಯ ಮತ್ತು ಪರಿಸರ ಸಮತೋಲನಕ್ಕೆ ಕೊಡುಗೆ ನೀಡುತ್ತವೆ. ಮರವನ್ನು ನೋಡಿದಾಗ ಅದರ ನೆರಳನ್ನು ಮಾತ್ರವಲ್ಲ, ಅದರ ಹಿಂದೆ ಇರುವ ಪ್ರಕೃತಿಯ ವಿಜ್ಞಾನವನ್ನೂ ಅರ್ಥಮಾಡಿಕೊಳ್ಳೋಣ. ಮರಗಳನ್ನು ಉಳಿಸೋಣ, ಸ್ಥಳೀಯ ಸಸ್ಯಗಳನ್ನು ಸಂರಕ್ಷಿಸೋಣ, ಹಸಿರು ಪರಿಸರವನ್ನು ಮುಂದಿನ ಪೀಳಿಗೆಗೆ ಉಳಿಸೋಣ.

"ಒಂದು ಮರ ಅನೇಕ ಜೀವಗಳಿಗೆ ಆಶ್ರಯ; ಒಂದು ಹಸಿರು ಹೆಜ್ಜೆ ಭವಿಷ್ಯಕ್ಕೆ ದೊಡ್ಡ ಕೊಡುಗೆ."

ವಿನಾಯಕ ಬಿ. ತಿಪ್ಪಣ್ಣನವರ

ಈ ನಮ್ಮ ಧೃತಿ ನ್ಯೂಸ್

E NAMMA DHURTHI NEWS
KANNADA DAILY NEWS PAPER

## ಬೆಳಗಾವಿ : ಫ್ರಿಡ್ಜ್ ಸ್ಫೋಟಗೊಂಡು ಹೊತ್ತಿ ಉರಿದ ಮನೆ, ನಾಲ್ಕು ಮಂದಿ ಸಾವು



ಬೆಳಗಾವಿ: ಗಣೇಶೋತ್ಸವ ಸಂಭ್ರಮದ ಮೊದಲ ದಿನವೇ ಭೀಕರ ಅಗ್ನಿ ಅವಘಡ ಸಂಭವಿಸಿದ್ದು, ಒಂದೇ ಕುಟುಂಬದ ನಾಲ್ವರು ಸಜೀವ ದಹನಗೊಂಡು, ಇಬ್ಬರು ಗಂಭೀರವಾಗಿ ಗಾಯಗೊಂಡ ಘಟನೆ ನಗರದ ಚವ್ಹಾಟ ಗಲ್ಲಿಯಲ್ಲಿ ತಡರಾತ್ರಿ ನಡೆದಿದೆ.

ಮನೆಯಲ್ಲಿ ಫ್ರಿಜ್ ಸ್ಫೋಟಗೊಂಡ ಪರಿಣಾಮ ಬೆಂಕಿ ಹೊತ್ತಿಕೊಂಡು ಕ್ಷಣಾರ್ಧದಲ್ಲಿ ಇಡೀ ಮನೆಗೆ ಬೆಂಕಿ ಆವರಿಸಿದೆ. ಮನೆಯಲ್ಲಿದ್ದವರು ಬೆಂಕಿಯಿಂದ ಹೊರ ಬರಲಾಗದೆ ಸಿಲುಕಿಕೊಂಡ ಪರಿಣಾಮ ಈ ದುರಂತ ಸಂಭವಿಸಿದೆ. ಗಜಾನನ ದಮೋನೆ (65), ರೋಷನ ದಮೋನೆ (21), ಶಾರದಾ ದಮೋನೆ (45) ಹಾಗೂ ಭಾರತಿ ದಮೋನೆ (50) ಮೃತಪಟ್ಟವರು. ಅವಘಡದಲ್ಲಿ ಪ್ರಿಯಾ ದಮೋನೆ (28) ಹಾಗೂ ಗಂಗಾ ದಮೋನೆ (25) ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮೃತ ಕುಟುಂಬ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿತ್ತು. ಗಣೇಶ ಚತುರ್ಥಿಯ ದಿನವೇ ಒಂದೇ ಕುಟುಂಬದ ನಾಲ್ವರು ಮೃತಪಟ್ಟಿರುವುದು ಕುಟುಂಬಸ್ಥರಲ್ಲಿ ಆಘಾತ ಮೂಡಿಸಿದೆ. ನಗರದ ಮಾರ್ಕೆಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## ಬೈಕ್‌ಗಳು ಮುಖಾಮುಖಿ ಡಿಕ್ಕಿಯಾಗಿ ರಸ್ತೆಗೆ ಬಿದ್ದ ಸವಾರರ ಮೇಲೆ ಹರಿದ KSRTC ಬಸ್, ಇಬ್ಬರ ಸಾವು





ಬೈಕ್‌ಗಳು ಮುಖಾಮುಖಿ ಡಿಕ್ಕಿ; ಬಸ್ ಹರಿದು ಇಬ್ಬರ ದಾರುಣ ಸಾವುಚಿಕ್ಕಮಗಳೂರು, ಸೆ.15– ಎರಡು ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ರಸ್ತೆಗೆ ಬಿದ್ದ ಸವಾರರ ಮೇಲೆ ಸರ್ಕಾರಿ ಬಸ್ ಹರಿದ ಪರಿಣಾಮ ಇಬ್ಬರು ಮೃತಪಟ್ಟ ಘಟನೆ ಕಡೂರು ತಾಲೂಕಿನ ಹಳೆಹಟ್ಟಿ ಗೇಟ್ ಸಮೀಪ ನಡೆದಿದೆ.

ಕಡೂರಿನಿಂದ ಚಿಕ್ಕಮಗಳೂರು ಕಡೆಗೆ ತೆರಳುತ್ತಿದ್ದ ಬೈಕ್ ಹಾಗೂ ಎದುರಿನಿಂದ ಬಂದ ಮತ್ತೊಂದು ಬೈಕ್ ನಡುವೆ ಡಿಕ್ಕಿ ಸಂಭವಿಸಿದೆ. ಡಿಕ್ಕಿಯ ರಭಸಕ್ಕೆ ಇಬ್ಬರು ಸವಾರರು ರಸ್ತೆಗೆ ಬಿದ್ದಿದ್ದು, ಇದೇ ವೇಳೆ ಹಿಂಬದಿಯಿಂದ ಬಂದ ಸರ್ಕಾರಿ ಬಸ್ ಅವರ ಮೇಲೆ ಹರಿದಿದೆ ಮೃತರು ರಾಜಸ್ಥಾನ ಮೂಲದವರು ಎಂದು ತಿಳಿದುಬಂದಿದ್ದು, ಅವರ ಗುರುತು ಹಾಗೂ ಇತರ ವಿವರಗಳನ್ನು ಪೊಲೀಸರು ಪತ್ತೆಹಚ್ಚುತ್ತಿದ್ದಾರೆ. ಮತ್ತೊಂದು ಬೈಕ್‌ನಲ್ಲಿದ್ದ ಸವಾರ–ರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಕಡೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸ್ಥಳಕ್ಕೆ ಸಖರಾಯಪಟ್ಟಣ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಅಪಘಾತದ ನಿಖರ ಕಾರಣದ ಕುರಿತು ತನಿಖೆ ಮುಂದುವರಿಸಿದ್ದಾರೆ.

## ರಷ್ಯಾ ಅಧ್ಯಕ್ಷ ಪುಟಿನ್ ಆಪ್ತನ ಹಣದಲ್ಲಿ ಮದುವೆಯಾಗಿದ್ದ ಟ್ರಂಪ್ ಜೂನಿಯರ್

ನ್ಯೂಯಾರ್ಕ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪುತ್ರ ಡೊನಾಲ್ಡ್ ಟ್ರಂಪ್ ಜೂನಿಯರ್ ಅವರ ಮೇ ತಿಂಗಳ ವಿವಾಹದ ನಂತರ ನಡೆದ ಸಂಭ್ರಮಾಚರಣೆಗೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೊಂದಿಗೆ ನಿಕಟ ಸಂಪರ್ಕ ಹೊಂದಿರುವ ಉದ್ಯಮಿ ಉಮರ್ ಕ್ರೆಮ್ಲೆವ್ ಭಾಗಶಃ ಹಣಕಾಸು ನೆರವು ನೀಡಿದ್ದರು ಎಂದು ಟ್ರಂಪ್ ಜೂನಿಯರ್ ಅವರ ಪತ್ನಿ ಬೆಟ್ಟಿನಾ ದೃಢಪಡಿಸಿದ್ದಾರೆ.




ಬೆಟ್ಟಿನಾ ಟ್ರಂಪ್ ಅವರು ಇನ್‌ಸ್ಟಾಗ್ರಾಂನಲ್ಲಿ ದಂಪತಿಯ ಹೆಸರಿನಲ್ಲಿ ಪ್ರಕಟಿಸಿದ ಹೇಳಿಕೆಯಲ್ಲಿ ಕ್ರೆಮ್ಲೆವ್ ಅವರನ್ನು ಆತ್ಮೀಯ ಸ್ನೇಹಿತ ಎಂದು ಕರೆದಿದ್ದು, ವಿವಾಹದ ಬಳಿಕ ನಡೆದ ಎರಡು ಅದ್ಧೂರಿ ರಾತ್ರಿ ಸಂಭ್ರಮಾಚರಣೆಗಳನ್ನು ಅವರು ಉದಾರವಾಗಿ ಆಯೋಜಿಸಿದ್ದರು ಎಂದು ತಿಳಿಸಿದ್ದಾರೆ. ಸುದ್ದಿವಾಹಿನಿ ಪ್ರೊಪಬ್ಲಿಕಾ ವರದಿ ಪ್ರಕಾರ, ಬಹಾಮಾಸ್‌ನಲ್ಲಿ ನಡೆದ ಮೂರು ದಿನಗಳ ಸಂಭ್ರಮಾಚರಣೆಗೆ ಕ್ರೆಮ್ಲೆವ್ ನೂರಾರು ಸಾವಿರ ಡಾಲರ್ ವೆಚ್ಚ ಭ–ರಿಸಿದ್ದರು. ಎರಡು ಖಾಸಗಿ ದ್ವೀಪಗಳ ಪೈಕಿ ಒಂದನ್ನು ಬಾಡಿಗೆಗೆ ಪಡೆಯುವ ವೆಚ್ಚ ಹಾಗೂ ಪಟಾಕಿ ಪ್ರದರ್ಶನದ ಖರ್ಚನ್ನೂ ಅವರು ಪಾವತಿಸಿದ್ದರು ಎಂದು ವರದಿಯಾಗಿದೆ. ಕ್ರೆಮ್ಲೆವ್ ಇಂಟ–ರ್‌ನ್ಯಾಷನಲ್ ಬಾಕ್ಸಿಂಗ್ ಅಸೋಸಿಯೇಷನ್‌ನ ಮುಖ್ಯಸ್ಥರಾಗಿದ್ದಾರೆ. ವಿವಾಹ ಸಮಾರಂಭವನ್ನು ಕುಟುಂಬದ ಸದಸ್ಯರ ಸಮ್ಮುಖದಲ್ಲಿ ಖಾಸಗಿಯಾಗಿ ನಡೆಸಲಾಗಿತ್ತು. ಬಳಿಕ ಸ್ನೇಹಿತರೊಂದಿಗೆ ನಡೆಯಬೇಕಿದ್ದ ಕಾರ್ಯಕ್ರಮವನ್ನು ಮೊದಲೇ ಯೋಜಿಸಲಾಗಿತ್ತು. ವಿವಾಹ ಯೋಜನೆ ಬದಲಾದ ಹಿನ್ನೆಲೆಯಲ್ಲಿ ಅದರ ಮುನ್ನವೇ ವಿವಾಹವಾಗಿ, ನಂತರದ ಕಾರ್ಯಕ್ರಮದಲ್ಲಿ ನವದಂಪತಿಯಾಗಿ ಭಾಗವಹಿಸಿದ್ದಾಗಿ ಬೆಟ್ಟಿನಾ ಹೇಳಿದ್ದಾರೆ. ರಷ್ಯಾ–ಉಕ್ರೇನ್ ಯುದ್ಧ ಮುಂದುವರಿದಿರುವ ಸಂದರ್ಭದಲ್ಲಿ ಈ ಉಡುಗೊರೆ ಬಂದಿರುವುದು ಗಮನ ಸೆಳೆದಿದೆ. ಪುಟಿನ್ ಇತ್ತೀಚೆಗೆ ಕ್ರೆಮ್ಲೆವ್ ಅವರಿಗೆ ಆರ್ಡರ್ ಆಫ್ ಫ್ರೆಂಡ್‌ಶಿಪ್ ಗೌರವ ನೀಡಿದ್ದರು. ಅಲ್ಲದೆ, ಚೀನಾಕ್ಕೆ ತೆರಳಿದ್ದ ರಷ್ಯಾ ನಿಯೋಗದೊಂದಿಗೆ ಕ್ರೆಮ್ಲೆವ್ ಪುಟಿನ್ ಅವರನ್ನು ಭೇಟಿ ಮಾಡಿದ್ದರು ಎಂದು ವರದಿಯಾಗಿದೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# ಬಿಜೆಪಿ ಸೇರಲು ಸಿದ್ಧರಾದ ಟಿಎಂಸಿ ಬಿಟ್ಟು ಎನ್‌ಸಿಪಿಐ ಸೇರಿದ್ದ 17 ಸದಸ್ಯರು

ಕೋಲ್ಕತ್ತಾ: ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ಮತ್ತೊಂದು ಮಹಾ ತಿರುವು ಸಿಕ್ಕಿದೆ. ತೃಣಮೂಲ ಕಾಂಗ್ರೆಸ್ (ಟಿಎಂಸಿ)ಯಿಂದ ಹೊರಬಂದು ಎನ್‌ಸಿಪಿಐ ಸೇರಿದ 20 ಬಂಡಾಯ ಸಂಸದರ ಪೈಕಿ 17 ಸಂಸದರು ಬಿಜೆಪಿ ಸೇರಲು ಸಜ್ಜಾಗಿದ್ದಾರೆ ಎಂದು ಕೂಚ್ ಬೆಹಾರ್ ಸಂಸದ ಜಗದೀಶ್ ಚಂದ್ರ ಬರ್ಮಾ ಬಸುನಿಯಾ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಈ ಸಂಭಾವ್ಯ ಪಕ್ಷಾಂತರವು ಪಶ್ಚಿಮ ಬಂಗಾಳ ಮತ್ತು ದೆಹಲಿ ರಾಜಕೀಯ ಪಡಸಾಲೆಯಲ್ಲಿ ಭಾರಿ ಸಂಚಲನ ಮೂಡಿಸಿದೆ. ಒಟ್ಟು 20 ಬಂಡಾಯ ಸಂಸದರಲ್ಲಿ 17 ಸಂಸದರು ಒಟ್ಟಾಗಿ ಬಿಜೆಪಿ ಸೇರುತ್ತಿರುವುದ–ರಿಂದ, ಇದು ಒಟ್ಟು ಬಲದ ಮೂರನೇ ಎರಡರಷ್ಟು ಪ್ರಮಾಣವಾಗುತ್ತದೆ. ಹೀಗಾಗಿ ಸಂವಿಧಾನದ 10ನೇ ಶೆಡ್ಯೂಲ್ (ಪಕ್ಷಾಂತರ ನಿಷೇಧ ಕಾಯ್ದೆ) ಅಡಿಯಲ್ಲಿ ಸಂಸದ ಸ್ಥಾನ ಅನರ್ಹತೆಯಾಗುವುದಿಲ್ಲ ಎಂದು ಬಸುನಿಯಾ ಸ್ಪಷ್ಟಪಡಿಸಿದ್ದಾರೆ. ಮುರ್ಷಿದಾಬಾದ್ ಭಾಗದ ಪ್ರಮುಖ ಸಂಸದರಾದ ಅಬು ತಾಹೆರ್ ಖಾನ್, ಜಂಗಿಪುರ ಸಂಸದ ಖಲೀಲುರ್ ರೆಹಮಾನ್




ಮತ್ತು ಬೆಹ್ರಾಂಪೋರ್ ಸಂಸದ ಯೂಸುಫ್ ಪಠಾಣ್ (ಮಾಜಿ ಕ್ರಿಕೆಟಿಗ) ಬಿಜೆಪಿಗೆ ಸೇರಲು ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಇವರ ವಿರೋಧದಿಂದಾಗಿಯೇ ನೇರವಾಗಿ ಬಿಜೆಪಿ ಸೇರದೆ ಮಧ್ಯಂತರವಾಗಿ ಎನ್‌ಸಿಪಿಐಗೆ ಸೇರಲಾಗಿತ್ತು ಎಂದು ಬಸುನಿಯಾ ಬಹಿರಂಗಪಡಿಸಿದ್ದಾರೆ. ಈ 17 ಸಂಸದರು ಅಧಿಕೃತವಾಗಿ ಬಿಜೆಪಿ ಸೇರಿದರೆ, ಪಶ್ಚಿಮ ಬಂಗಾಳದ ಒಟ್ಟು 42 ಲೋಕಸಭಾ ಸ್ಥಾನಗಳಲ್ಲಿ ಬಿಜೆಪಿಯ ಬಲ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 29ಕ್ಕೆ ಏರಲಿದೆ. ಹಾಗೆಯೇ ಕೇಂದ್ರ ಲೋಕಸಭೆಯಲ್ಲಿ ಬಿಜೆಪಿಯ ಒಟ್ಟು ಸಂಖ್ಯಾಬಲ 252ಕ್ಕೆ ತಲುಪಲಿದೆ. ಈ ಬೆಳವಣಿಗೆ ಬಗ್ಗೆ ಪ್ರತಿಕ್ರಿಯಿಸಿರುವ ಪಶ್ಚಿಮ ಬಂಗಾಳ ಬಿಜೆಪಿ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ, ಯಾರು ಬೇಕಾದರೂ ಬಿಜೆಪಿ ಸೇರಲು ಇಚ್ಛಿಸಬಹುದು, ಆದರೆ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಕೇ ಬೇಡವೇ ಎಂಬುದನ್ನು ಕೇಂದ್ರ ನಾಯಕತ್ವವೇ ನಿರ್ಧರಿಸುತ್ತದೆ ಎಂದಿದ್ದಾರೆ. ಬಂಡಾಯವೆದ್ದು ಪ್ರತ್ಯೇಕ ಗುಂಪು ರಚಿಸಿಕೊಂಡ 20 ಸಂಸದರ ವಿರುದ್ಧ ಟಿಎಂಸಿ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ಅನರ್ಹತೆ ಅರ್ಜಿ ಸಲ್ಲಿಸಿದ್ದು, ಇತ್ತ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ಮುಂದೆಯೂ ವಿಲೀನದ ಅರ್ಜಿ ಬಾಕಿ ಉಳಿದಿದೆ.

ಹೌರಾದಲ್ಲಿ ಕೇಂದ್ರ ಕಚೇರಿ ಹೊಂದಿರುವ ನ್ಯಾಷನಲಿಸ್ಟ್ ಸಿಟಿಜನ್ಸ್ ಪಾರ್ಟಿ ಆಫ್ ಇಂಡಿಯಾ ಇದುವರೆಗೆ ಯಾವುದೇ ಗಣನೀಯ ಸಾಧನೆ ಮಾಡದ ಸಣ್ಣ ಪಕ್ಷವಾಗಿದ್ದು, ತ್ರಿಪುರಾ ಚುನಾವಣೆಯಲ್ಲಿ ಕೆಲವೇ ನೂರು ಮತಗಳನ್ನು ಗಳಿಸಿತ್ತು. ಅನರ್ಹತೆಯಿಂದ ತಾತ್ಕಾಲಿಕವಾಗಿ ರಕ್ಷಣೆ ಪಡೆಯಲು ಸಂಸದರು ಈ ಪಕ್ಷದ ಮೊರೆ ಹೋಗಿದ್ದರು ಎಂಬುದು ಈಗ ಬಹಿರಂಗವಾಗಿದೆ. ದುರ್ಗಾ ಪೂಜೆಯ ಹೊತ್ತಿಗೆ ಈ 17 ಸಂಸದರು ಎನ್‌ಡಿಎ ತೆಕ್ಕೆಗೆ ಜಾರಿದರೆ, ಮುಂಬರುವ ದಿನಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್‌ಗೆ ಮತ್ತಷ್ಟು ರಾಜಕೀಯ ಹಿನ್ನಡೆಯಾಗುವ ಸಾಧ್ಯತೆಯಿದೆ.

# ಭಾರತ–ಚೀನಾ ಪಾಲುದಾರಿಕೆಗೆ ಮೋದಿ–ಜಿನ್‌ಪಿಂಗ್ ಸಮ್ಮತಿ

ಬೀಜಿಂಗ್: ಬ್ರಿಕ್ಸ್ ಶೃಂಗಸಭೆಯ ಸಂದರ್ಭದಲ್ಲಿ ಭಾರತ ಮತ್ತು ಚೀನಾ ಪಾಲುದಾರರಾಗಿರಬೇಕು ಎಂಬ ಅತ್ಯಂತ ಪ್ರಮುಖ ಒಮ್ಮತಕ್ಕೆ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಮತ್ತು ಪ್ರಧಾನಿ ನರೇಂದ್ರ ಮೋದಿ ಬಂದಿದ್ದಾರೆ ಎಂದು ಚೀನಾದ ಉನ್ನತ ರಾಜ–ತಾಂತ್ರಿಕರೊಬ್ಬರು ತಿಳಿಸಿದ್ದಾರೆ.

ಸೆಪ್ಟೆಂಬರ್ 12 ಮತ್ತು 13ರಂದು ನವದೆಹಲಿಯಲ್ಲಿ ನಡೆದ 18ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಲು ಅಧ್ಯಕ್ಷ ಕ್ಸಿ ನಡೆಸಿದ ಭೇಟಿ ಹಾಗೂ ಪ್ರಧಾನಿ ಮೋದಿಯವರೊಂದಿಗಿನ ಅವರ ಸಭೆಯ ಕುರಿತು ಮಾತನಾಡಿದ ವಿದೇಶಾಂಗ ಸಚಿವ ವಾಂಗ್ ಯಿ, ಉಭಯ ನಾಯಕರು ಚೀನಾ–ಭಾರತ ಸಂಬಂಧಗಳಿಗೆ ಸಂಬಂಧಿಸಿದ ಕಾರ್ಯತಂತ್ರದ, ದೀರ್ಘಕಾಲೀನ ಮತ್ತು ದಿಶೆಯನ್ನು ನಿರ್ಧರಿಸುವ ವಿಷಯಗಳ ಕು–ರಿತು ಮುಕ್ತ ಹಾಗೂ ಆಳವಾದ ಅಭಿಪ್ರಾಯ ವಿನಿಮಯ ನಡೆಸಿದರು ಎಂದು ಹೇಳಿದರು. ಚೀನಾ ಮತ್ತು ಭಾರತ ಪಾಲುದಾರರಾಗಿರಬೇಕು ಎಂಬುದೇ ಅವರು ತಲುಪಿದ ಅತ್ಯಂತ ಪ್ರಮುಖ ಒಮ್ಮತವಾಗಿದೆ ಎಂದು ವಾಂಗ್ ಚೀನಾದ ಅಧಿಕೃತ ಮಾಧ್ಯಮಕ್ಕೆ ತಿಳಿಸಿದರು. ಚೀನಾ ಮತ್ತು ಭಾರತ ಪರಸ್ಪರರ ಸಾಮರ್ಥ್ಯಗಳನ್ನು ಬಳಸಿಕೊಳ್ಳಬಹುದು, ಪರಸ್ಪರ ಬೆಂಬಲಿಸಬಹುದು, ಯಶಸ್ಸಿಗೆ ಸಹಾಯ ಮಾಡಬಹುದು ಮತ್ತು ಜಂಟಿ ಅಭಿವೃದ್ಧಿಯನ್ನು ಸಾಧಿಸಬಹುದು ಎಂದು ಅಧ್ಯಕ್ಷ ಕ್ಸಿ ಹೇಳಿದ್ದಾರೆ ಎಂದು ವಾಂಗ್ ತಿಳಿಸಿದರು.

ವಾಂಗ್ ಅವರು ಚೀನಾದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ರಾಜ–ಕೀಯ ಬ್ಯೂರೋದ ಸದಸ್ಯರೂ ಆಗಿದ್ದಾರೆ. ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಜಂಟಿಯಾಗಿ ಕಾಪಾಡಿಕೊಳ್ಳಲು ಉಭಯ ದೇಶಗಳ ನಾಯಕರು ಒಪ್ಪಿಕೊಂಡರು. ಬ್ರಿಕ್ಸ್‌ನ ಸರದಿಯ ಅಧ್ಯಕ್ಷ ರಾಷ್ಟ್ರಗಳಾಗಿ ಕಾರ್ಯನಿರ್ವಹಿಸುವಾಗ ಪರಸ್ಪರ ಬೆಂಬಲ ನೀಡುವುದಾಗಿಯೂ ನಿರ್ಧರಿಸಿದರು ಎಂದು ವಾಂಗ್ ಹೇಳಿದರು. ಮೋದಿ–ಕ್ಸಿ ಭೇಟಿಯು ವ್ಯಾಪಕ ಅಂತರರಾಷ್ಟ್ರೀಯ ಗಮನ ಸೆಳೆಯಿತು ಎಂದು ಅವರು ಹೇಳಿದರು. ಉಭಯ ದೇಶಗಳ ನಾಯಕರ ಕಾರ್ಯತಂತ್ರದ ಮಾರ್ಗದರ್ಶನದಲ್ಲಿ, ಚೀನಾ–ಭಾರತ ಸಂಬಂಧಗಳು ಕ್ರಮೇಣ ಕೆಳಮಟ್ಟದಿಂದ ಹೊರಬಂದಿದ್ದು, ಮರುಆರಂಭದಿಂದ ನವೀಕೃತ ಉನ್ನತ ಮಟ್ಟದತ್ತ ಪ್ರಗತಿ ಸಾಧಿಸಿವೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ



ವೆಬ್‌ಸೈಟ್‌ನಲ್ಲಿ ಪ್ರಕಟವಾದ ಹೇಳಿಕೆ ತಿಳಿಸಿದೆ.

ಉಭಯ ದೇಶಗಳ ನಡುವಿನ ಸಹಕಾರದ ಕ್ಷೇತ್ರಗಳು ವಿಸ್ತರಿಸುತ್ತಿವೆ, ವ್ಯಾಪಾರದ ಪ್ರಮಾಣವು ದಾಖಲೆಯ ಮಟ್ಟವನ್ನು ತಲುಪಿದೆ ಮತ್ತು ಜನರ ನಡುವಿನ ವಿನಿಮಯವು ಹೆಚ್ಚು ಚೈತನ್ಯಶಾಲಿಯಾಗುತ್ತಿದೆ. ಚೀನಾ–ಭಾರತ ಸಂಬಂಧಗಳ ಸುಧಾರಣೆ ಮತ್ತು ಅಭಿವೃದ್ಧಿಯನ್ನು ಎರಡೂ ರಾಷ್ಟ್ರಗಳ 2.8 ಶತಕೋಟಿಗೂ ಹೆಚ್ಚು ಜನರು ಸ್ವಾಗತಿಸುವುದಲ್ಲದೆ, ಇದು ಗ್ಲೋಬಲ್ ಸೌತ್ (ಜಾಗತಿಕ ದಕ್ಷಿಣ ರಾಷ್ಟ್ರಗಳು) ಸಹಕಾರವನ್ನು ಬಲಪಡಿಸುವ ಪ್ರಮುಖ ಆಧಾರಸ್ತಂಭವಾಗಿದೆ ಎಂದು ವಾಂಗ್ ಹೇಳಿದರು.

ರಾಜಕೀಯ ಪರಸ್ಪರ ನಂಬಿಕೆಯನ್ನು ಮತ್ತಷ್ಟು ಬೆಳೆಸಲು, ಭಿನ್ನಾಭಿಪ್ರಾಯಗಳು ಮತ್ತು ವೈರುಧ್ಯಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ಹಾಗೂ ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಜಂಟಿಯಾಗಿ ಎತ್ತಿಹಿಡಿಯಲು ಎರಡೂ ಕಡೆಯವರು ಬದ್ಧರಾಗಿದ್ದಾರೆ ಎಂದು ಅವರು ಹೇಳಿದರು.

# ಟ್ರಂಪ್ ಹೊಸ ವೀಸಾ ನಿಯಮಕ್ಕೆ ಕೋರ್ಟ್ ತಡೆ

ವಾಷಿಂಗ್ಟನ್: ವಿದೇಶಿ ವಿದ್ಯಾರ್ಥಿಗಳು ಮತ್ತು ಪತ್ರಕರ್ತರು ಅಮೆರಿಕದಲ್ಲಿ ಅಧ್ಯಯನ ಅಥ–'ವಾ ಕೆಲಸ ಮಾಡುವ ಅವಧಿಗೆ ಕಠಿಣ ಮಿತಿ ವಿಧಿಸುವ ಟ್ರಂಪ್ ಆಡಳಿತದ ಹೊಸ ವೀಸಾ ನಿಯಮ ಜಾರಿಗೆ ಅಮೆರಿಕದ ಫೆಡರಲ್ ನ್ಯಾಯಾಧೀಶರು ತಾತ್ಕಾಲಿಕ ತಡೆ ನೀಡಿದ್ದಾರೆ.

ಮಸಾಚ್ಯುಸೆಟ್ಸ್ ಜಿಲ್ಲಾ ನ್ಯಾಯಾಧೀಶ ಎಫ್. ಡೆನ್ನಿಸ್ ಸೇಲರ್ ನಾಲ್ಕನೇ ಅವರು ನೀಡಿರುವ ಈ ಆದೇಶದಿಂದ ಭಾರತ ಸೇ–ರಿದಂತೆ ವಿವಿಧ ದೇಶಗಳ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ತಾತ್ಕಾಲಿಕ ಪರಿಹಾರ ದೊರೆತಿದೆ. ಈ ಹೊಸ ನಿಯಮ ಇಂದಿನಿಂದ ಜಾರಿಗೆ ಬರಬೇಕಿತ್ತು. ಹೊಸ ನೀತಿಯು ಅಮೆರಿಕದ ಆರ್ಥಿಕತೆ ಹಾಗೂ ಉನ್ನತ ಶಿಕ್ಷಣ ವ್ಯವಸ್ಥೆಯ ಮೇಲೆ ವಿನಾಶಕಾರಿ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟರು. ದೇಶದ ಭದ್ರತೆಗಾಗಿ ಈ ನಿಯಮ ಅಗತ್ಯ ಎಂಬ ಸರ್ಕಾರದ ವಾದವನ್ನೂ ಅವರು ತಿರಸ್ಕ–ರಿಸಿದರು.

ಜುಲೈನಲ್ಲಿ ಅಂತಿಮಗೊಳಿಸಲಾಗಿದ್ದ



ನಿಯಮದಂತೆ, ವಿದ್ಯಾರ್ಥಿ ಹಾಗೂ ವಿನಿಮಯ ಕಾರ್ಯಕ್ರಮಗಳ ವೀಸಾಗಳಿಗೆ ನಾಲ್ಕು ವರ್ಷಗಳ ಮಿತಿ ವಿಧಿಸಲಾಗಿ–ತ್ತು. ಚೀನಾ ಹೊರತುಪಡಿಸಿ ವಿದೇಶಿ ಪತ್ರಕರ್ತರ ವೀಸಾಗಳಿಗೆ 240 ದಿನ ಹಾಗೂ ಚೀನಾದ ಪತ್ರಕರ್ತರಿಗೆ 90 ದಿನಗಳ ಮಿತಿ ನಿಗದಿಪಡಿಸಲಾಗಿತ್ತು. ವಿದ್ಯಾರ್ಥಿಗಳು ಮತ್ತು ಪತ್ರಕರ್ತರು ವೀಸಾ ಅವಧಿ ವಿಸ್ತರಣೆಗೆ ಅರ್ಜಿ ಸಲ್ಲಿಸಬಹುದಾಗಿದ್ದರೂ, ಅದರ ಅನುಮೋದನೆ ಗೃಹ ಭದ್ರತಾ ಇಲಾಖೆಯ ಅಧಿಕಾರಿಗಳ ವಿವೇಚನೆಗೆ ಒಳಪಟ್ಟಿತ್ತು. ವಿಸ್ತರಣೆ ನಿರಾಕರಣೆಯ ವಿರುದ್ಧ ಮೇಲ್ಮನವಿ ಸಲ್ಲಿಸಲು ಅವಕಾಶ ಇರಲಿಲ್ಲ. ಸುಮಾರು 600 ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಪ್ರತಿನಿಧಿಸುವ ಸಂಘಟನೆಗಳು ನಿಯಮ ರದ್ದುಪಡಿಸುವಂತೆ ನ್ಯಾಯಾಲಯದ ಮೊರೆ ಹೋಗಿದ್ದವು. ಅಮೆರಿಕದಲ್ಲಿ 5,000ಕ್ಕೂ ಹೆಚ್ಚು ಉನ್ನತ ಶಿಕ್ಷಣ ಸಂಸ್ಥೆಗಳಿರುವುದ–ರಿಂದ ಅರ್ಜಿದಾರರಿಗೆ ಮಾತ್ರ ಪರಿಹಾರ ನೀಡುವುದು ಗೊಂದಲ ಸೃಷ್ಟಿಸಲಿದೆ ಎಂದು ನ್ಯಾಯಾಧೀಶರು ಹೇಳಿದರು.

ಹಾರ್ವರ್ಡ್ ವಿಶ್ವವಿದ್ಯಾಲಯದ ಅಧ್ಯಕ್ಷ ಅಲನ್ ಗಾರ್ಬರ್, ಪಿಎಚ್‌ಡಿ ಪೂರ್ಣಗೊಳಿಸಲು ಸಾಮಾನ್ಯವಾಗಿ ಕನಿಷ್ಠ ಆರು ವರ್ಷ ಬೇಕಾಗುತ್ತದೆ. ಹೀಗಿರುವಾಗ ವಿದ್ಯಾರ್ಥಿ ವೀಸಾಗೆ ನಾಲ್ಕು ವರ್ಷಗಳ ಮಿತಿ ವಿಧಿಸಿರುವುದು ವಿಚಿತ್ರವಾಗಿದೆ ಎಂದು ಈ ಹಿಂದೆ ಟೀಕಿಸಿದ್ದರು. ವೀಸಾ ವಂಚನೆ ನಿಯಂತ್ರಿಸಲು ಹಾಗೂ ಅವಧಿ ಮೀರಿಸಿ ಅಮೆ–ರಿಕದಲ್ಲಿ ಉಳಿಯುವವರನ್ನು ತಡೆಯಲು ಈ ನಿಯಮ ನೆರವಾಗಲಿದೆ ಎಂದು ಗೃಹ ಭದ್ರತಾ ಇಲಾಖೆ ವಾದಿಸಿತ್ತು. ಆದರೆ ಸರ್ಕಾರವನ್ನು, ವಿಶೇಷವಾಗಿ ಗೃಹ ಭದ್ರತಾ ಇಲಾಖೆ ಅಧಿಕಾ–ರಿಗಳನ್ನು ಟೀಕಿಸುವ ವಿದೇಶಿ ಪತ್ರಕರ್ತರ ವೀಸಾ ನವೀಕರಣ ನಿರಾಕರಣೆಗೆ ಈ ನಿಯಮ ದುರ್ಬಳಕೆಯಾಗುವ ಸಾಧ್ಯತೆಯನ್ನೂ ನ್ಯಾಯಾಧೀಶರು ಪ್ರಸ್ತಾಪಿಸಿದರು.

## ತಾವರೆಕೆರೆ ಮೆಟ್ರೋ ನಿಲ್ದಾಣಕ್ಕೆ 'ಬಿಸಿಲ್ಲಾ ನಗರ' ಎಂದು ಮರುನಾಮಕರಣ ಮಾಡಲು ಆಗ್ರಹ

ಬೆಂಗಳೂರು: ನಮ ಮೆಟ್ರೋದ ಪಿಂಕ್ ಲೈನ್ ವ್ಯಾಪ್ತಿಯ ತಾವರೆಕೆರೆ ನಿಲ್ದಾಣಕ್ಕೆ ಬಿಸಿಲ್ಲಾ ನಗರ ನಿಲ್ದಾಣ ಎಂದು ಮರು ನಾಮಕರಣ ಮಾಡುವಂತೆ ಒತ್ತಾಯ ಮಾಡಲಾಗುತ್ತಿದೆ. ಕೆಲ ದಿನಗಳ ಹಿಂದೆ ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಅವರು ಕೆಲವು ಮೆಟ್ರೋ ನಿಲ್ದಾಣಗಳ ಹೆಸರು ಬದಲಾವಣೆ ಮಾಡಬೇಕು ಎಂದು ನೀಡಿದ್ದ ಸಲಹೆ ಬೆನ್ನಲ್ಲೇ ಈ ಒತ್ತಾಯ ಮಾಡಲಾಗಿದೆ.

ನಮ ಮೆಟ್ರೋದ ಪಿಂಕ್ ಲೈನ್ ವ್ಯಾಪ್ತಿಯ ತಾವರೆಕೆರೆ ಮೆಟ್ರೋ ನಿಲ್ದಾಣ–ಕ್ಕೆ ಬಿಸ್ಮಿಲ್ಲಾ ನಗರ ನಿಲ್ದಾಣ ಎಂದು ಮರು ನಾಮಕರಣ ಮಾಡಬೇಕೆಂಬ ಬೇಡಿಕೆ ಕೇಳಿಬಂದಿದೆ. ಸ್ಥಳೀಯ ನಿವಾಸಿಗಳು ಹಾಗೂ ಕೆಲ ಮುಸ್ಲಿಂ ಸಮುದಾಯದ ಮುಖಂಡರ ನಿಯೋಗ ಬಿಎಂಆರ್‌ಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಪಿ.ಸಿ. ಜಾಫರ್ ಅವರನ್ನು ಭೇಟಿಯಾಗಿ ಮನವಿ ಪತ್ರ ಸಲ್ಲಿಸಿದೆ. ತಾವರೆಕೆರೆ ಮೆಟ್ರೋ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಿಸ್ಮಿಲ್ಲಾ ನಗರ ಅತ್ಯಂತ ಪ್ರಮುಖ ಹಾಗೂ ದೊಡ್ಡ ಬಡಾವಣೆಯಾಗಿದೆ. ಈ ಭಾಗದಲ್ಲಿ ಮುಸ್ಲಿಂ ಸಮುದಾಯದ ಜನಸಂಖ್ಯೆ ಹೆಚ್ಚಾಗಿದ್ದು, ಪ್ರತಿದಿನ ಸಾವಿ ರಾರು ಸ್ಥಳೀಯ ನಿವಾಸಿಗಳು ಸಂಚಾರಕ್ಕಾಗಿ ಇದೇ ನಿಲ್ದಾಣವನ್ನೇ ಅವಲಂಬಿ ಸಲಿದ್ದಾರೆ. ಹೀಗಾಗಿ ನಿಲ್ದಾಣಕ್ಕೆ ಬಿಸ್ಮಿಲ್ಲಾ ನಗರ ಮೆಟ್ರೋ ನಿಲ್ದಾಣ ಎಂದು ಹೆಸರಿಡಬೇಕು, ಇಲ್ಲವೇ ಸ್ಥಳೀಯರ ಅನುಕೂಲಕ್ಕಾಗಿ ಬಿಸ್ಮಿಲ್ಲಾ ನಗರ ? ತಾವರೆಕೆರೆ ಎಂದು ಜಂಟಿ ಹೆಸರನ್ನು ನಾಮಕರಣ




ಮಾಡಬೇಕು ಎಂದು ನಿಯೋಗ ಮನವಿ ಮಾಡಿಕೊಂಡಿದೆ.

ಕೆಲ ದಿನಗಳ ಹಿಂದೆ ಸಚಿವ ರಾಮಲಿಂಗಾರೆಡ್ಡಿ ಅವರು ಇದೇ ತಾವರೆಕೆರೆ ನಿಲ್ದಾಣ ಸೇರಿದಂತೆ ಒಟ್ಟು ಮೂರು ನಿಲ್ದಾಣಗಳ ಹೆಸರು ಬದಲಾವಣೆಗೆ ಬಿಎಂಆರ್‌ಸಿಎಲ್‌ಗೆ ಪತ್ರ ಬರೆದಿದ್ದರು. ಆದರೆ ಅವರು ತಾವರೆಕೆರೆ ನಿಲ್ದಾಣಕ್ಕೆ ಎಸ್.ಜಿ. ಪಾಳ್ಯ ಮೆಟ್ರೋ ನಿಲ್ದಾಣ ಎಂದು ಹೆಸರಿಡುವಂತೆ ಪ್ರಸ್ತಾಪಿಸಿದ್ದರು. ಜೊತೆಗೆ, ಸ್ಥಳೀಯ ಹೆಸರುಗಳನ್ನು ಬಳಸುವುದರಿಂದ ಪ್ರಯಾಣಿಕರಿಗೆ ಅನುಕೂಲವಾಗುತ್ತದೆ ಎಂಬ ಕಾರಣದಿಂದ ಜೆ.ಪಿ. ನಗರ 4ನೇ ಹಂತದ ನಿಲ್ದಾಣವನ್ನು ಎಸ್.ಎಸ್. ಪಾಳ್ಯ ಎಂದೂ ಮತ್ತು ಡೈರಿ ಸರ್ಕಲ್ ನಿಲ್ದಾಣವನ್ನು ಲಕ್ಕಸಂದ್ರ ಎಂದೂ ಮರುನಾಮಕರಣ ಮಾಡುವಂತೆ ಸೂಚಿಸಿದ್ದರು.ಸಚಿವರ ಈ ಹೇಳಿಕೆ ಬೆನ್ನಲ್ಲೇ ಮುಸ್ಲಿಂ ನಿಯೋಗ ತಾವರೆಕೆರೆ ನಿಲ್ದಾಣ–ಕ್ಕೆ ಬಿಸಿಲ್ಲಾ ನಗರ ನಿಲ್ದಾಣ ಎಂದು ಮರು ನಾಮಕರಣ ಮಾಡುವಂತೆ ಒತ್ತಾಯಿಸಿರುವುದ–ರಿಂದ ವಿವಾದ ಸೃಷ್ಟಿಯಾಗುವ ಸಾಧ್ಯತೆಗಳಿವೆ.

Publisher and Owned by CHANDRAKANTA From Near Durgamma Temple Dyampur, Koppal District- 583232 Printed at VINAYA Printers, VINAYA Publication Word No.01 Ballary Pootwer, Bhagynagar, Koppal- 583238, Editor : CHANDRAKANTA enammadhruthinews@gmail.com